ಸಂಪಾದಕರು :
ಎಂ.ಎಸ್. ವಿಕಾಸ್

ಬುಧವಾರ, ನವೆಂಬರ್ 29, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 197 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999



## ನಗರದಲ್ಲಿ ಕ್ರಿಕೆಟ್ ಹಬ್ಬ ಆರಂಭ

**ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪನವರ ಸವಿನೆನಪಿಗಾಗಿ ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿರುವ 16ನೇ ವರ್ಷದ ರಾಷ್ಟ್ರಮಟ್ಟದ ಹೊನಲು ಬೆಳಕಿನ ಲೀಗ್ ಕಂ ನಾಕೌಟ್ ಕ್ರಿಕೆಟ್ ಪಂದ್ಯಾವಳಿಗಳಿಗೆ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಮಂಗಳವಾರ ಸಂಜೆ ಬ್ಯಾಟ್ ಮಾಡುವುದರ ಮೂಲಕ ಚಾಲನೆ ನೀಡಿದರು. ಉದ್ಯಮಿಗಳಾದ ಎಸ್.ಎಸ್. ಗಣೇಶ್, ಅಥಣಿ ಎಸ್.ವೀರಣ್ಣ, ದಿನೇಶ್ ಕೆ.ಶೆಟ್ಟಿ, ಕುರುಡಿ ಗಿರೀಶ್, ಜಯಪ್ರಕಾಶ್ ಗೌಡ ಮತ್ತಿತರರಿದ್ದರು.**

# ಸುರಂಗ ಗರ್ಭದಿಂದ 41 ಕಾರ್ಮಿಕರು ಹೊರಕ್ಕೆ

ಉತ್ತರಕಾಶಿ, ನ. 28 – ಹದಿನೇಳು ದಿನಗಳ ಕಾಲ ಉತ್ತರಾಖಂಡದ ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿದ್ದ ಎಲ್ಲಾ 41 ಕಾರ್ಮಿಕರನ್ನು ಮಂಗಳವಾರ ರಕ್ಷಿಸಲಾಗಿದೆ. ಹಲವು ಸಂಸ್ಥೆಗಳು ರಕ್ಷಣಾ ಕಾರ್ಯಾಚರಣೆ ನಡೆಸಿ ಯಶಸ್ಸು ಸಾಧಿಸಿವೆ.

ಸುರಂಗದಲ್ಲಿ 60 ಮೀಟರ್ ಉದ್ದದ ಉಕ್ಕಿನ ಕೊಳವೆ ಮಾರ್ಗ ಅಳವಡಿಸುವ ಮೂಲಕ ಇವರನ್ನು ರಕ್ಷಿಸಲಾಗಿದೆ. ಕಾರ್ಮಿಕರನ್ನು ರಾತ್ರಿ 8 ಗಂಟೆ ವೇಳೆ ಹೊರ ತರಲು ಸಾಧ್ಯವಾಯಿತು.

ಗಣಿ ಪರಿಣಿತರು ಹಾಗೂ ಸೈನ್ಯದ ಪರಿಣಿತರು ಕೊನೆ ಹಂತದ ಸುರಂಗವನ್ನು ಅಗೆಯುವ ಮೂಲಕ ಕಾರ್ಮಿಕರನ್ನು ತಲುಪಲು ಸಾಧ್ಯವಾಯಿತು. ಆಂಬ್ಯುಲೆನ್ಸ್ ಮೂಲಕ ಕಾರ್ಮಿಕರನ್ನು ತಪಾಸಣೆಗೆ ಕರೆದೊಯ್ಯಲಾಯಿತು.

ನಂತರ ಮಾತನಾಡಿರುವ ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಯಾವುದೇ ಕಾರ್ಮಿಕರು ಗಂಭೀರ ಆರೋಗ್ಯ ಸಮಸ್ಯೆ ಎದುರಿಸುತ್ತಿಲ್ಲ. ಆದರೂ, ಕೆಲ ಕಾಲ ಅವರನ್ನು ವೈದ್ಯಕೀಯ ನಿಗಾದಲ್ಲಿ ಇರಿಸಲಾಗುವುದು ಎಂದಿದ್ದಾರೆ.

ರಾತ್ರಿ 8 ಗಂಟೆ ವೇಳೆ ಕಾರ್ಮಿಕರನ್ನು ಒಬ್ಬೊಬ್ಬರಾಗಿ ಹೊರ ತರಲು ಸಾಧ್ಯವಾಯಿತು. ಯುವ ಕಾರ್ಮಿಕನನ್ನು



ಮೊದಲು ಕೊಳವೆ ಮಾರ್ಗದ ಮೂಲಕ ಹೊರಗೆ ತರಲಾಯಿತು. ಹೊರ ಬಂದ ಕಾರ್ಮಿಕರಿಗೆ ಸ್ಥಳದಲ್ಲೇ ತ್ವರಿತ ತಪಾಸಣೆಯನ್ನೂ ನಡೆಸಲಾಯಿತು. ನಂತರ ಆಂಬ್ಯುಲೆನ್ಸ್‌ನಲ್ಲಿ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಸ್ಥಳೀಯ ಸಮುದಾಯ ಕೇಂದ್ರದಲ್ಲಿ ಇವರಿಗಾಗಿ 41 ಹಾಸಿಗೆಗಳ ವಾರ್ಡ್ ರೂಪಿಸಲಾಗಿತ್ತು.

ಕಳೆದ ನವೆಂಬರ್ 12ರಂದು ಚಾರ್ ಧಾಮ್ ಮಾರ್ಗದಲ್ಲಿ ನಿರ್ಮಿಸಲಾಗುತ್ತಿದ್ದ ಹೆದ್ದಾರಿಯ ಸುರಂಗ ಮಾರ್ಗ ಕುಸಿದಿತ್ತು. ಸುರಂಗದಲ್ಲಿ ಸಿಲುಕಿದ್ದ ಕಾರ್ಮಿಕರಿಗೆ ಆರು ಇಂಚಿನ ಗಾತ್ರದ ಕೊಳವೆ ಮೂಲಕ ಔಷಧ, ಆಹಾರ ಹಾಗೂ ಇತರೆ ಅಗತ್ಯ ವಸ್ತುಗಳನ್ನು ಪೂರೈಸಲಾಗುತ್ತಿತ್ತು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ರಾಷ್ಟ್ರಪತಿ ದ್ರೌಪದಿ ಮುರ್ಮು ಸೇರಿದಂತೆ ಹಲವು ಗಣ್ಯರು ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗಿಯಾದವರಿಗೆ ಅಭಿನಂದಿಸಿದ್ದಾರೆ. ಕಾರ್ಯಾಚರಣೆ ಯಶಸ್ವಿಯಾಗಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದ್ದಾರೆ.

ಕಾರ್ಮಿಕರ ರಕ್ಷಣೆಗಾಗಿ ಅಮೆರಿಕ ನಿರ್ಮಿತ ಆಗರ್ ಬೋರಿಂಗ್ ಯಂತ್ರದ ಮೂಲಕ ಸಮಾನಾಂತರವಾಗಿ ಕೊಳವೆ ಮಾರ್ಗ ಕೊರೆಯಲಾಗಿತ್ತು. ಆದರೆ, 47 ಮೀಟರ್ ಅಂತರದಲ್ಲಿ ಯಂತ್ರ ಸಿಕ್ಕಿಕೊಂಡಿತು.

ನಂತರ ಗಣಿ ಪರಿಣಿತರ ತಂಡವನ್ನು ಕರೆಸಿ ಉಳಿದ ಮಾರ್ಗವನ್ನು ಮಾನವ ಶಕ್ತಿಯಿಂದ ರೂಪಿಸಲಾಯಿತು. ಅಂತಿಮ ಹಂತದಲ್ಲಿ ಮಾನವ ಶಕ್ತಿಯೇ ನೆರವಾಯಿತು.

## ಚುನಾವಣಾ ಪೂರ್ವ ಸಮೀಕ್ಷೆ ಆಧಾರದ ಮೇಲೆ ಕ್ಷೇತ್ರ ಹಂಚಿಕೆಗೆ ನಿರ್ಧಾರ

**ಬಿಜೆಪಿ-ಜೆಡಿಎಸ್ ಮಾತುಕತೆ**

ಬೆಂಗಳೂರು, ನ. 28 - ಲೋಕಸಭೆ ಚುನಾವಣಾ ಪೂರ್ವ ಸಮೀಕ್ಷೆ ಆಧಾರದ ಮೇಲೆ ಕ್ಷೇತ್ರಗಳನ್ನು ಹಂಚಿಕೆ ಮಾಡಿಕೊಳ್ಳಲು ಬಿಜೆಪಿ ಹಾಗೂ ಜೆಡಿಎಸ್ ತೀರ್ಮಾನಿಸಿವೆ.

ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳಲ್ಲಿ 20ರಿಂದ 25 ಸ್ಥಾನಗಳನ್ನು ಗೆಲ್ಲಲ್ಲೇಬೇಕೆಂದು ಪಣತೊಟ್ಟಿರುವ ಬಿಜೆಪಿ, ಇದಕ್ಕಾಗಿ ಜೆಡಿಎಸ್ ಅನ್ನು ಎನ್‌ಡಿಎ ಮೈತ್ರಿ ಕೂಟಕ್ಕೆ ಸೇರ್ಪಡೆ ಮಾಡಿಕೊಳ್ಳುವುದರ ಜತೆಗೆ, ದೆಹಲಿ ಮೂಲದ 4 ಖಾಸಗಿ ಸಂಸ್ಥೆಗಳ ಮೂಲಕ ಸಮೀಕ್ಷೆ ನಡೆಸಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು, ಕಳೆದ ಭಾನುವಾರ ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಬಿಡದಿ ತೋಟದಲ್ಲಿ ಭೇಟಿಯಾಗಿ, ಲೋಕಸಭೆ ಚುನಾವಣೆಗೆ ಸಂಬಂಧಿಸಿದಂತೆ ಒಂದು ತಾಸಿಗೂ ಹೆಚ್ಚುಕಾಲ ಮಾತುಕತೆ ನಡೆಸಿದ್ದಾರೆ.

ಪಂಚರಾಜ್ಯಗಳ ಚುನಾವಣೆ ಪ್ರಕ್ರಿಯೆ ಪೂರ್ಣಗೊಂಡು ಫಲಿತಾಂಶ ಹೊರಬಿದ್ದ ನಂತರ ದೆಹಲಿಗೆ ತೆರಳಿ ಬಿಜೆಪಿ ವರಿಷ್ಠರನ್ನು ಭೇಟಿ ಮಾಡಿ, ಸೀಟು ಹಂಚಿಕೆ ಹಾಗೂ ಅಭ್ಯರ್ಥಿಗಳ ಆಯ್ಕೆ ಸಂಬಂಧ (2ನೇ ಪುಟಕ್ಕೆ)

## ರಷ್ಯಾ ಗಡಿ ಮುಚ್ಚಲು ಫಿನ್‌ಲ್ಯಾಂಡ್ ನಿರ್ಧಾರ

ಹೆಲ್ಸಿಂಕಿ, ನ. 28 – ರಷ್ಯಾ ತನ್ನ ಭದ್ರತೆಯನ್ನು ಕಡೆಗಣಿಸುತ್ತಿದೆ. ವಲಸೆ ಕಳವಳದ ಕಾರಣದಿಂದಾಗಿ ರಷ್ಯಾದ ಜೊತೆಗಿನ ಕೊನೆಯ ರಸ್ತೆ ಗಡಿಯನ್ನೂ ಮುಚ್ಚುವುದಾಗಿ ಫಿನ್‌ಲ್ಯಾಂಡ್ ಪ್ರಧಾನ ಮಂತ್ರಿ ಪೆಟ್ಟೆರಿ ಒರ್ಪೊ ಹೇಳಿದ್ದಾರೆ.

ರಷ್ಯಾದ ಜೊತೆಗಿನ ಗಡಿಯ ಎಂಟು ಚೆಕ್‌ಪಾಯಿಂಟ್‌ಗಳ ಪೈಕಿ ಏಳನ್ನು ಫಿನ್‌ಲ್ಯಾಂಡ್ ಈಗಾಗಲೇ ಮುಚ್ಚಿದೆ. ಮಧ್ಯಪ್ರಾಚ್ಯ ಹಾಗೂ ಆಫ್ರಿಕಾದಿಂದ ವಲಸಿಗರ ಸಂಖ್ಯೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿತ್ತು. ಈ ತಿಂಗಳಲ್ಲಿ 900 ವಲಸಿಗರು ರಷ್ಯಾ ಗಡಿ ಮೂಲಕ ಬಂದಿದ್ದಾರೆ. ಇದು ಸಾಮಾನ್ಯಕ್ಕಿಂತ ಹೆಚ್ಚಾಗಿದೆ. ಫಿನ್‌ಲ್ಯಾಂಡ್‌ನಲ್ಲಿ ವಲಸಿಗರ ಬಿಕ್ಕಟ್ಟು ಸೃಷ್ಟಿಸಲು ರಷ್ಯಾ ಯತ್ನಿಸುತ್ತಿದೆ ಎಂದು ಆರೋಪಿಸಲಾಗಿದೆ.

## ಹಸುಳೆಗಳ ಕದ್ದು ಮಾರುವ ಜಾಲ ಬಯಲು

ಬೆಂಗಳೂರು, ನ. 28 - ಹಸುಳೆಗಳನ್ನು ಕದ್ದು ಮಾರುತ್ತಿದ್ದ ಜಾಲವೊಂದನ್ನು ಬೆಂಗಳೂರು ಪೊಲೀಸರು ಬಯಲಿಗೆ ಎಳೆದಿದ್ದು, ಏಳು ಜನರನ್ನು ಬಂಧಿಸಿದ್ದಾರೆ.

ಈ ಬಗ್ಗೆ ವಿವರ ನೀಡಿರುವ ಬೆಂಗಳೂರು ಪೊಲೀಸ್ ಆಯುಕ್ತ ಬಿ. ದಯಾನಂದ, ಪ್ರಕರಣದಲ್ಲಿ ವೈದ್ಯರೂ ಭಾಗಿಯಾಗಿರುವ ಶಂಕೆ ಇದೆ ಎಂದಿದ್ದಾರೆ.

ರಾಜಾಜಿನಗರದಲ್ಲಿ ಶಂಕಾಸ್ಪದವಾಗಿ ವರ್ತಿಸುತ್ತಿದ್ದ ವ್ಯಕ್ತಿಗಳನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆಗೆ ಒಳಪಡಿಸಿದಾಗ ಇಡೀ ದಂಧೆ ಬೆಳಕಿಗೆ ಬಂದಿದೆ. ಪೊಲೀಸರು 20 ದಿನಗಳ ಗಂಡು ಮಗುವನ್ನು ರಕ್ಷಿಸಿದ್ದಾರೆ.

ಸುಹಾಸಿನಿ, ಗೋಮತಿ, ಕಣ್ಣನ್ ರಾಮಸ್ವಾಮಿ, ಹೇಮಲತ, ಶರಣ್ಯ, ಮಹಾಲಕ್ಷ್ಮಿ ಹಾಗೂ ರಾಧಾ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ. ಇವರಲ್ಲಿ ಬಹುತೇಕರು ತಮಿಳುನಾಡಿನವರಾಗಿದ್ದಾರೆ.



**ಮಕ್ಕಳಿಲ್ಲದವರಿಗೆ ದುಬಾರಿ ಹಣಕ್ಕೆ ಮಕ್ಕಳನ್ನು ಮಾರುತ್ತಿದ್ದ ಜಾಲದಲ್ಲಿ ವೈದ್ಯರೂ ಭಾಗಿಯಾಗಿರುವ ಶಂಕೆ**

ಈ ತಂಡ ನವಜಾತ ಶಿಶುಗಳನ್ನು ಕದ್ದು ನಂತರ ಹೆಚ್ಚಿನ ಬೆಲೆಗೆ ಮಕ್ಕಳಿಲ್ಲದ ದಂಪತಿಗೆ ಮಾರಾಟ ಮಾಡುತ್ತಿತ್ತು. ಬಹುತೇಕ ಮಕ್ಕಳನ್ನು ಬೆಂಗಳೂರಿನಲ್ಲಿ ಮಾರಲಾಗಿದೆ. ಶಂಕಿತರು ನೆರೆಯ ತಮಿಳುನಾಡಿನಿಂದ ಮಕ್ಕಳನ್ನು ತರುತ್ತಿದ್ದರು. ಇದು ದೊಡ್ಡ ಜಾಲವಾಗಿದೆ. ಮಕ್ಕಳಿಲ್ಲದವರಿಗೆ ಇವರು 8ರಿಂದ 10 ಲಕ್ಷ ರೂ.ಗಳಿಗೆ ಮಕ್ಕಳನ್ನು ಮಾರುತ್ತಿದ್ದರು.

ಇದುವರೆಗೂ ಹತ್ತು ಮಕ್ಕಳನ್ನು ಮಾರಿರುವುದು ತನಿಖೆಯಿಂದ ಪತ್ತೆಯಾಗಿದೆ ಎಂದು ದಯಾನಂದ ಹೇಳಿದ್ದಾರೆ. ಇದರ ಹಿಂದೆ ದೊಡ್ಡ ಜಾಲವಿರುವುದು ಕಂಡು ಬಂದಿದೆ. ಇದರಲ್ಲಿ ತಮಿಳುನಾಡಿನ ವೈದ್ಯರೂ ಭಾಗಿಯಾಗಿರಬಹುದು ಎಂದವರು ತಿಳಿಸಿದ್ದಾರೆ. ಈ ತಂಡ ಹಲವಾರು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿತ್ತು. ಇತ್ತೀಚೆಗಷ್ಟೇ ಇವರ ಕೃತ್ಯ ಬೆಳಕಿಗೆ ಬಂದಿದೆ.

ಇವರನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆಗೆ ಒಳಪಡಿಸುತ್ತಿದ್ದೇವೆ ಎಂದು ಪೊಲೀಸ್ ಆಯುಕ್ತರು ಹೇಳಿದ್ದಾರೆ. ಈ ತಂಡ ಮಕ್ಕಳಿಲ್ಲದ ದಂಪತಿಗೆ ಪೋರ್ಜರಿ ದಾಖಲೆಗಳನ್ನು ಒದಗಿಸುತ್ತಿತ್ತು ಎಂದೂ ಅವರು ತಿಳಿಸಿದ್ದಾರೆ.

## ಪಂಚರಾಜ್ಯ ಚುನಾವಣೆ ಅಪರಾಧಿಕ ಹಿನ್ನೆಲೆಯ ಶೇ.18 ಅಭ್ಯರ್ಥಿಗಳು

ನವದೆಹಲಿ, ನ. 28 – ಪಂಚರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳಲ್ಲಿ ಶೇ.18ರಷ್ಟು ಜನರು ಅಪ ರಾಧಿಕ ಹಿನ್ನೆಲೆ ಹೊಂದಿದ್ದಾರೆ. ಶೇ.29ರಷ್ಟು ಅಭ್ಯರ್ಥಿಗಳು ಕೋಟ್ಯಾಧೀಶರಾಗಿದ್ದಾರೆ ಎಂದು ವರದಿಯೊಂದು ತಿಳಿಸಿದೆ.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಸಂಘಟನೆಯು ಚುನಾವಣಾ ಕಣದಲ್ಲಿರುವ 8,054 ಅಭ್ಯರ್ಥಿಗಳ ಪೈಕಿ 8,051 ಅಭ್ಯರ್ಥಿಗಳ ಪ್ರಮಾಣ ಪತ್ರಗಳ ಪರಿಶೀಲನೆ ನಡೆಸಿ ಈ ವರದಿ ರೂಪಿಸಿದೆ. ಮಿಜೋರಾಂ, ಛತ್ತೀಸ್‌ಘಡ, ಮಧ್ಯ ಪ್ರದೇಶ, ರಾಜಸ್ಥಾನ ಹಾಗೂ ತೆಲಂಗಾಣ ವಿಧಾನಸಭೆಗಳಿಗೆ ಚುನಾವಣೆ ನಡೆಯುತ್ತಿದೆ. (2ನೇ ಪುಟಕ್ಕೆ)

## 70 ಲಕ್ಷ ಮೊಬೈಲ್ ಸಂಖ್ಯೆಗಳಿಗೆ ತಡೆ

ನವದಹಲಿ, ನ. 28 – ಡಿಜಿಟಲ್ ವಂಚನೆ ತಡೆಯುವ ಸಲುವಾಗಿ ಶಂಕಾಸ್ಪದ ವಹಿವಾಟು ನಡೆಸುತ್ತಿದ್ದ 70 ಲಕ್ಷ ಮೊಬೈಲ್ ಸಂಖ್ಯೆಗಳ ಖಾತೆಗಳನ್ನು ಅಮಾನತ್ತುಗೊಳಿಸಲಾಗಿದೆ ಎಂದು ಹಣಕಾಸು ಸೇವೆಗಳ ಕಾರ್ಯದರ್ಶಿ ವಿವೇಕ್ ಜೋಶಿ ತಿಳಿಸಿದ್ದಾರೆ.

ಹಣಕಾಸು ಸೈಬರ್ ಭದ್ರತೆ ಕುರಿತ ಸಭೆಯಲ್ಲಿ ಪಾಲ್ಗೊಂಡ ನಂತರ ಮಾತನಾಡಿರುವ ಜೋಷಿ, ಬ್ಯಾಂಕುಗಳು ವ್ಯವಸ್ಥೆ ಬಲಪಡಿಸಿಕೊಳ್ಳಲು ತಿಳಿಸಲಾಗಿದೆ ಎಂದು ಹೇಳಿದ್ದಾರೆ.

**ಶಿರಮಗೊಂಡನಹಳ್ಳಿ ನಾಡಿಗರ ರತ್ನಮ್ಮ ನಿಧನ**



ದಾವಣಗೆರೆ ತಾಲ್ಲೂಕು ಶಿರಮಗೊಂಡನಹಳ್ಳಿ ಗ್ರಾಮದ ವಾಸಿ
ದಿವಂಗತ ನಾಡಿಗರ ರಾಮಚಂದ್ರಪ್ಪನವರ ಧರ್ಮಪತ್ನಿ
**ಶ್ರೀಮತಿ ನಾಡಿಗರ ರತ್ನಮ್ಮನವರು**
ದಿನಾಂಕ: 28.11.2023ರ ಮಂಗಳವಾರ ಮಧ್ಯಾಹ್ನ
3:05 ನಿಮಿಷಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಅವರಿಗೆ 94 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಓರ್ವ ಪುತ್ರಿ,
ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ
ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು
ದಿನಾಂಕ 29.11.2023ರ ಬುಧವಾರ 12 ಗಂಟೆಗೆ ಸ್ವಗ್ರಾಮ
ಶಿರಮಗೊಂಡನಹಳ್ಳಿಯ ಮೃತರ ತೋಟದಲ್ಲಿ ನೆರವೇರಿಸಲಾಗುವುದು.
ಇಂತಿ ದು:ಖತಪ್ತ ಕುಟುಂಬ ವರ್ಗ, ಮೊ: 96320 10060

## ದಿವ್ಯಾಂಗರಿಗೆ ನೆರವಾಗಲು ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ

ನವದೆಹಲಿ, ನ. 28 - ದಿವ್ಯಾಂಗ ಮಕ್ಕಳನ್ನು ಗುರುತಿಸಲು ಹಾಗೂ ನೆರವಾಗಲು ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ ನೀಡಲು ಕೇಂದ್ರ ಸರ್ಕಾರ ರಾಷ್ಟ್ರೀಯ ಶಿಷ್ಟಾಚಾರವನ್ನು ಆರಂಭಿಸಿದೆ.

ಇದೇ ಮೊದಲ ಬಾರಿಗೆ ಅಂಗನವಾಡಿ (4ನೇ ಪುಟಕ್ಕೆ)

## ಸೌರ ಚಟುವಟಿಕೆ ತೀವ್ರದಿಂದ ಉಪಗ್ರಹಗಳಿಗೆ ಹಾನಿ ಸಾಧ್ಯತೆ

ನವದೆಹಲಿ, ನ. 28 - ಪ್ರಸಕ್ತ ಕಂಡು ಬರುತ್ತಿರುವ ಸೌರ ಚಟುವಟಿಕೆಯ ಆವೃತ್ತಿಯು 2024ರ ವೇಳೆಗೆ ಅತಿ ಹೆಚ್ಚಿನ ತೀವ್ರತೆ ಪಡೆದುಕೊಳ್ಳಲಿದೆ. ಇದು ಭೂಮಿಯ ಬಾಹ್ಯಾಕಾಶ ವಾತಾವರಣದ ಮೇಲೆ ಪರಿಣಾಮ ಬೀರಲಿದೆ ಎಂದು ಕೊಲ್ಕೊತಾದ ಐ.ಐ.ಎಸ್.ಇ.ಆರ್. ಸಂಸ್ಥೆಯ ಸಂಶೋಧಕರು ಹೇಳಿದ್ದಾರೆ.

ಪ್ರತಿ 11 ವರ್ಷಗಳಿಗೊಮ್ಮೆ ಸೌರ ಚಟುವಟಿಕೆಗಳು (2ನೇ ಪುಟಕ್ಕೆ)

## ವಿದ್ಯಾರ್ಥಿಗಳ ಅಸ್ವಸ್ಥ ಪ್ರಕರಣ: ಪ್ರಾಂಶುಪಾಲ, ವಾರ್ಡನ್ ಅಮಾನತ್ತು

ದಾವಣಗೆರೆ, ನ.28- ಚನ್ನಗಿರಿ ತಾಲ್ಲೂಕು ಕಾಕನೂರು ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ವಿಷಪೂರಿತ ಆಹಾರ ಪೂರೈಕೆ ಹಾಗೂ ಕರ್ತವ್ಯ ಲೋಪ ಎಸಗಿದ ಪ್ರಾಂಶುಪಾಲ ಮಂಜುನಾಥ್ ಪುರದ್ ಹಾಗೂ ನಿಲಯ ಪಾಲಕಿ ನಸೀಮಾ ಬಾನು ಅವರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಂ.ವಿ ಆದೇಶಿಸಿದ್ದಾರೆ.

ಈ ವಸತಿ ಶಾಲೆಯಲ್ಲಿ ಸೋಮವಾರ ಬೆಳಗ್ಗೆ ಉಪಹಾರ ಸೇವಿಸಿದ ನಂತರ ಕೆಲ ವಿದ್ಯಾರ್ಥಿಗಳ ಆರೋಗ್ಯ ದಲ್ಲಿ ಏರುಪೇರಾಗಿರುವುದು ಕಂಡು (4ನೇ ಪುಟಕ್ಕೆ)


**ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ.,**
ಪ್ರಧಾನ ಕಛೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ. ರಸ್ತೆ, ದಾವಣಗೆರೆ - 577002

**ಸದಸ್ಯರ ಗಮನಕ್ಕೆ**

- ಬ್ಯಾಂಕಿನ ಉಪನಿಯಮದನ್ವಯ ಬ್ಯಾಂಕಿನ ಸದಸ್ಯರು ಕನಿಷ್ಠ ಷೇರು ಮೊತ್ತ ರೂ. 1000/- ಹೊಂದಿರತಕ್ಕದ್ದು, ಇಲ್ಲವಾದಲ್ಲಿ ಮುಂಬರುವ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ಮತದಾನ ಮಾಡುವ ಅರ್ಹತೆ ಇರುವುದಿಲ್ಲ. ಆದ್ದರಿಂದ ಭಾಗಶ: ಷೇರು ಮೊತ್ತ ಹೊಂದಿರವ ಮಾನ್ಯ ಸದಸ್ಯರುಗಳು ಈ ಕೂಡಲೇ ಪ್ರಧಾನ ಕಛೇರಿಗೆ ಭೇಟಿ ನೀಡಿ ಷೇರು ಮೊತ್ತವನ್ನು ರೂ. 1000/- ಗಳಿಗೆ ಸರಿ ಮಾಡಿಕೊಳ್ಳುವುದು.
- ಬ್ಯಾಂಕಿನ ಸದಸ್ಯರಿಗೆ ಕಳುಹಿಸುವ ವಾರ್ಷಿಕ ವರದಿಗಳು ಹಾಗೂ ಪತ್ರಗಳು ವಿಳಾಸ ಬದಲಾಗಿದೆ ಎಂಬ ಕಾರಣಕ್ಕೆ ವಾಪಸ್ಸು ಬಂದಿರುತ್ತವೆ. ಆದ್ದರಿಂದ ಸದಸ್ಯರು ತಮ್ಮ ವಿಳಾಸ ಬದಲಾದಲ್ಲಿ, ಬ್ಯಾಂಕಿನ ಕೆಲಸದ ವೇಳೆಯಲ್ಲಿ ಆಡಳಿತ ಕಛೇರಿಗೆ ಬಂದು ಸಂಬಂಧಿಸಿದ ದಾಖಲೆಗಳನ್ನು ನೀಡಿ, ಷೇರು ಖಾತೆಯಲ್ಲಿ ವಿಳಾಸ ಬದಲಾಯಿಸಿಕೊಳ್ಳಲು ಕೋರಿದೆ.
- ಡಿವಿಡೆಂಡ್ ಪಡೆಯಲು ಖಾತೆ ಹೊಂದುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ಸದಸ್ಯರು ಉಳಿತಾಯ ಖಾತೆಯನ್ನು ತೆರೆಯುವುದು ಹಾಗು ಡಿವಿಡೆಂಡ್ ಪಡೆಯದೇ ಇರುವ ಸದಸ್ಯರು ಕೂಡಲೇ ಆಡಳಿತ ಕಛೇರಿಗೆ ಬಂದು ತಮ್ಮ ಡಿವಿಡೆಂಡ್ ಪಡೆಯುವುದು, ಇಲ್ಲವಾದಲ್ಲಿ 3 ವರ್ಷದ ನಂತರ ಬ್ಯಾಂಕಿನ ಉಪವಿಧಿ ಪ್ರಕಾರ ಆಪದ್ಧನ ನಿಧಿಗೆ ವರ್ಗಾವಣೆ ಮಾಡಲಾಗುವುದು.
- ಭಾರತೀಯ ರಿಸರ್ವ್ ಬ್ಯಾಂಕ್‌ನ ನಿರ್ದೇಶನದ ಪ್ರಕಾರ ಸದಸ್ಯರು/ಖಾತೆದಾರರು ತಮ್ಮ ಇತ್ತೀಚಿನ ಕೆ.ವೈ.ಸಿ. ದಾಖಲೆಗಳ ನಕಲು ಪ್ರತಿಯನ್ನು ಬ್ಯಾಂಕಿಗೆ ಸಲ್ಲಿಸಿ ಖಾತೆಯನ್ನು ಸರಿಪಡಿಸಿಕೊಳ್ಳುವುದು.

ಶ್ರೀ ಕೋಗುಂಡಿ ಬಕ್ಕೇಶಪ್ಪ — ಅಧ್ಯಕ್ಷರು
ಶ್ರೀ ಅಂದನೂರು ಮುಪ್ಪಣ್ಣ — ಉಪಾಧ್ಯಕ್ಷರು
ಶ್ರೀ ಬಿ.ಎಸ್. ಮಲ್ಲೇಶ್ — ಪ್ರಧಾನ ವ್ಯವಸ್ಥಾಪಕರು

**ಚಿರಸ್ಮರಣೆ**



**ಲಿಂ॥ ಶ್ರೀ ಎನ್.ಎಂ.ಜೆ.ಬಿ. ಆರಾಧ್ಯ**
ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ ಸಂಸ್ಥಾಪಕರು,
ಸಹಕಾರಿ ಧುರೀಣರು, 'ಸಹಕಾರ ರತ್ನ' ಪ್ರಶಸ್ತಿ ಮತ್ತು 'ಸಮನ್ವಯ ಸಿರಿ' ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರು,
ಕರ್ನಾಟಕ ರಾಜ್ಯ ಸಹಕಾರಿ ಮಹಾಮಂಡಳದ ಮಾಜಿ ನಿರ್ದೇಶಕರು,
ದಾವಣಗೆರೆ ಜಿಲ್ಲಾ ಸಹಕಾರ ಯೂನಿಯನ್‌ನ ನಿರ್ದೇಶಕರು ಮತ್ತು
ದಾವಣಗೆರೆ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟದ ಗೌರವ ಕಾರ್ಯದರ್ಶಿಗಳೂ ಆಗಿದ್ದ
*ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಡಳಿತ ಮಂಡಲಿ ;*

ಶ್ರೀ ಮುರುಗೇಶ್ ಎನ್.ಎ. — ಅಧ್ಯಕ್ಷರು
ಶ್ರೀಮತಿ ಜಯಮ್ಮ ಪರಶುರಾಮಪ್ಪ — ಉಪಾಧ್ಯಕ್ಷರು

ನಿರ್ದೇಶಕರುಗಳು :
✦ ಶ್ರೀ ಕಿರುವಾಡಿ ವಿ. ಸೋಮಶೇಖರ್ ✦ ಶ್ರೀ ಕುಬೇರಪ್ಪ ಎ. ಹೆಚ್. ✦ ಶ್ರೀ ಶಂಕರ್ ಖಟಾವ್‌ಕರ್
✦ ಶ್ರೀ ಪ್ರಭು ಪ್ರಸಾದ್ ಎಸ್.ಕೆ. ✦ ಶ್ರೀ ಜ್ಯೋತಿ ಪ್ರಕಾಶ್ ಕೆ.ಎಂ. ✦ ಶ್ರೀ ಚಿದಾನಂದಪ್ಪ ಬಿ.
✦ ಶ್ರೀ ವೆಂಕಪ್ಪ ಪಿ.ಹೆಚ್. ✦ ಶ್ರೀ ನಾಗೇಂದ್ರಚಾರಿ ಬಿ. ✦ ಶ್ರೀ ಕೊಟ್ರೇಶ್ ಎ.
✦ ಶ್ರೀಮತಿ ಉಮಾ ವಾಗೀಶ್ ✦ ಶ್ರೀ ವಿಶಾಲ್‌ಕುಮಾರ್ ಆರ್. ಸಂಘವಿ
✦ ಶ್ರೀಮತಿ ಅನಿತಾ ಕೋಗುಂಡಿ ಪ್ರಕಾಶ್ ✦ ಶ್ರೀಮತಿ ಅನೂಪ ಡಾ. ವೀರೇಂದ್ರಸ್ವಾಮಿ
ವೃತ್ತಿಪರ ನಿರ್ದೇಶಕರು : ✦ ಶ್ರೀ ಆರ್.ವಿ. ಶಿರಸಾಲಿಮಠ್ ✦ ಶ್ರೀ ಕಿರಣ್ ಆರ್. ಶೆಟ್ಟಿ
ವ್ಯವಸ್ಥಾಪನಾ ಮಂಡಲಿ ಅಧ್ಯಕ್ಷರು : ✦ ಶ್ರೀ ಕುಬೇರಪ್ಪ ಎ.ಹೆಚ್.
ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳು : ✦ ಶ್ರೀ ಕಿರುವಾಡಿ ವಿ. ಸೋಮಶೇಖರ್ ✦ ಶ್ರೀ ಕೆ.ಎಂ. ಬಸವರಾಜ್
✦ ಶ್ರೀಮತಿ ಜಿ.ಸಿ. ವಸುಂಧರ ✦ ಶ್ರೀಮತಿ ಶೈಲಾ ಹಾಲಸ್ವಾಮಿ ಕಂಬಳಿ
ಪ್ರಧಾನ ವ್ಯವಸ್ಥಾಪಕರು : ✦ ಶ್ರೀ ತುಳಸಿನಾಥ್ ಎನ್. ಹಾಗೂ ಸಿಬ್ಬಂದಿ ವರ್ಗದವರು

**ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ., ದಾವಣಗೆರೆ.**

# ಹಿಂದೂಗಳ ದಮನಕ್ಕೆ ವಿದೇಶಿ ಹಣ



ದಾವಣಗೆರೆ, ನ.28- ಭಾರತದಲ್ಲಿ ಹಿಂದೂಗಳನ್ನು ದಮನಿಸಲು ಹೊರ ದೇಶಗಳಿಂದ ಸಾಕಷ್ಟು ಹಣ ಬರುತ್ತಿದೆ ಎಂದು ಚಕ್ರವರ್ತಿ ಸೂಲಿಬೆಲೆ ಹೇಳಿದರು.

ನಮೋ ಬ್ರಿಗೇಡ್ ವತಿಯಿಂದ ನಗರದ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಸಮುದಾಯ ಭವನದಲ್ಲಿ ಆಯೋಜಿಸಲಾಗಿದ್ದ 'ಇನ್ನೂ ಮಲಗಿದರೆ ಏಳುವಾಗ ಭಾರತ ಇರುವುದಿಲ್ಲ' ಉಪನ್ಯಾಸ ಮಾಲಿಕೆಯ ಎರಡನೇ ದಿನದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಾರ್ವರ್ಡ್ ಯೂನಿವರ್ಸಿಟಿಗೆ 8 ರಿಂದ 10 ಬಿಲಿಯನ್ ಜಾಗತಿಕ ಮಟ್ಟದಲ್ಲಿ ಧನ ಸಹಾಯ ಹರಿದು ಬರುತ್ತಿದೆ. ಈ ಹಣವನ್ನು ಹಿಂದೂಗಳನ್ನು ದಮನಿಸಲು ಜಾಣ್ಮೆಯಿಂದ ಬಳಸಿಕೊಳ್ಳಲಾಗುತ್ತದೆ ಎಂದು ಹೇಳಿದರು. ಅಮೇರಿಕಾದಲ್ಲಿರುವ ಭಾರತೀಯ ಮೂಲಗಳ ಮಕ್ಕಳಿಗೂ ಹಿಂದುತ್ವದ ಬಗ್ಗೆ ಋಣಾತ್ಮಕವಾಗಿ ತಿಳಿಸಿಕೊಡುವುದರಿಂದ ಅವರು ಧೈರ್ಯವಾಗಿ ನಾವು ಹಿಂದೂಗಳು ಎಂದು ಹೇಳಿಕೊಳ್ಳಲೂ ಮುಜುಗರ ಪಡುವಂತೆ ಮಾಡಲಾಗುತ್ತಿದೆ ಎಂದರು.

ಅಮೇರಿಕಾ ತನ್ನ ಶತ್ರುದೇಶಗಳ ಮೇಲೆ ನಡೆಸುವ ದಾಳಿಗೆ ಸಮರ್ಪಕ ಕಾರಣ ನೀಡುತ್ತದೆ. ಆದರೆ ಭಾರತ ಪಾಕಿಸ್ತಾನದ ಮೇಲೆ ದಾಳಿ ನಡೆಸಿದರೆ ಬೇರೆ ದೊಡ್ಡ ರಾಷ್ಟ್ರಗಳಿಗೆ ಉತ್ತರ ನೀಡಬೇಕಾಗಿತ್ತು. ಆದರೆ ಈಗ ಭಾರತಕ್ಕೆ ಸಮರ್ಥ ಪ್ರಧಾನಿ ಸಿಕ್ಕಿರುವುದರಿಂದ ಉತ್ತರ ನೀಡುವ ಪ್ರಮೇಯ ಇಲ್ಲವಾಗಿದೆ ಎಂದು ಹೇಳಿದರು.

ಜಾತೀಯತೆಗೆ ಆರ್ಯರ ಆಕ್ರಮಣದ ಕಾರಣ ಎಂದು ಹೇಳಲಾಯಿತು. ಆದರೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ಬೇರೆ ಬೇರೆ ಪ್ರದೇಶದಲ್ಲಿ ಜಾತಿ ಬೇರೆ ಬೇರೆ ಸ್ವರೂಪದಲ್ಲಿತ್ತು.

ಜಾತಿ ಬರುವುದಕ್ಕೂ ಮೊದಲು ಭಾರತದಲ್ಲಿ ವರ್ಣ ವ್ಯವಸ್ಥೆ ಇತ್ತು. ಉನ್ನತ ಸ್ಥಾನದಲ್ಲಿದ್ದ ಬ್ರಾಹ್ಮಣ ವಿಷಯ ತಜ್ಞನಾಗಿದ್ದ. ಆಚರಣೆಯಲ್ಲಿ ಗುರುವಾಗಿದ್ದ. ಆದರೆ ಸಂಪತ್ತನ್ನು ಕ್ರೋಢೀಕರಿಸುವಂತಿಲ್ಲ ಎಂಬ ಚೌಕಟ್ಟು ಆತನಿಗಿತ್ತು.

ಕ್ಷತ್ರಿಯ ರಾಜಕೀಯ ಶಕ್ತಿ ಹಾಗೂ ಸೈನಿಕ ಆದರೂ ಈತನಿಗೆ ಸಂಪತ್ತಿನ ನಿಯಂತ್ರಣವಿರಲಿಲ್ಲ. ವೈಶ್ಯ ವ್ಯಾಪಾರ-ವಹಿವಾಟು ನಿರ್ವಹಿಸುತ್ತಿದ್ದ. ಆದರೆ ಈತನಿಗೆ ರಾಜಕಾರಣಕ್ಕೆ ಬರುವಂತಿಲ್ಲ ಎಂಬ ಚೌಕಟ್ಟಿತ್ತು.

ಶೂದ್ರ ಕುಶಲಕರ್ಮಿಯೂ, ಸರ್ಜರಿಯಿಂದ ಕೃಷಿವರೆಗೆ ಎಲ್ಲಾ ಕಾರ್ಯಗಳನ್ನೂ ಮಾಡಬಹುದಿತ್ತು. ಇವನು ಸಂಪತ್ತು ಸಂಗ್ರಹಿಸಬಹುದಾಗಿತ್ತು. ಯಾವ ಕಟ್ಟುಪಾಡಿಗಳೂ ಇರುತ್ತಿರಲಿಲ್ಲ. ಈ ರೀತಿಯಲ್ಲಿದ್ದ ವರ್ಣ ವ್ಯವಸ್ಥೆಯನ್ನು ಒಪ್ಪಿಕೊಂಡೇ ಭಾರತೀಯರು ಜೀವನ ಸಾಗಿಸುತ್ತಿದ್ದರು. ಆದರೆ ಬ್ರಿಟೀಷರು ಇದನ್ನು ಜಾತಿ ವ್ಯವಸ್ಥೆ ಎಂದರು.

# ಜ್ಞಾನವಾಪಿ ಸಮೀಕ್ಷಾ ವರದಿಗೆ ಇನ್ನಷ್ಟು ಸಮಯ ಕೇಳಿದ ಪುರಾತತ್ವ ಇಲಾಖೆ

ವಾರಣಾಸಿ, ನ. 28 - ಜ್ಞಾನವಾಪಿ ಮಸೀದಿ ಆವರಣದ ವೈಜ್ಞಾನಿಕ ಸಮೀಕ್ಷಾ ವರದಿ ಸಲ್ಲಿಸಲು ಇನ್ನಷ್ಟು ಸಮಯ ಬೇಕು ಎಂದು ಭಾರತೀಯ ಪುರಾತತ್ವ ಇಲಾಖೆ ಜಿಲ್ಲಾ ನ್ಯಾಯಾಲಯದಲ್ಲಿ ಮನವಿ ಸಲ್ಲಿಸಿದೆ.

ನವೆಂಬರ್ 28ರ ಒಳಗೆ ವರದಿ ಸಲ್ಲಿಸುವಂತೆ ವಾರಣಾಸಿ ಜಿಲ್ಲಾ ನ್ಯಾಯಾಲಯ ಈ ಹಿಂದೆ ತಿಳಿಸಿತ್ತು. ಈ ಬಗ್ಗೆ ಮನವಿ ಸಲ್ಲಿಸಿರುವ ಇಲಾಖೆ, ಇನ್ನೂ ಮೂರು ವಾರಗಳ ಸಮಯ ಬೇಕು ಎಂದು ಕೇಳಿದೆ. ವಿವಿಧ ಪರಿಣಿತರು ನೀಡಿರುವ ವಿವರಗಳನ್ನು ಪರಿಶೀಲಿಸಿ ವರದಿ ರೂಪಿಸಲು ಸಮಯ ಬೇಕು ಎಂದು ಮನವಿ ಸಲ್ಲಿಸಲಾಗಿದೆ. ಈ ಬಗ್ಗೆ ನ್ಯಾಯಾಲಯ ಬುಧವಾರ ವಿಚಾರಣೆ ನಡೆಸಲಿದೆ.

# ಮಾನವೀಯ, ಸಹಬಾಳ್ವೆಯ ಸಂಸ್ಕೃತಿ ಕನ್ನಡ ಭಾಷೆಯದ್ದು

## ನಗರ ಪಾಲಿಕೆಯ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ. ರಂಜಾನ್ ದರ್ಗಾ



ದಾವಣಗೆರೆ, ನ. 28- ಕನ್ನಡ ನಾಡು ಸರ್ವಜನಾಂಗದ ಶಾಂತಿಯ ತೋಟ. ಇಡೀ ಭಾರತದ ಭಾಷೆಗಳಲ್ಲಿ ವಿಶಿಷ್ಟವಾದುದು ಕನ್ನಡ ಸಾಹಿತ್ಯ ಚರಿತ್ರೆ. ಮಾನವೀಯ, ಸಹಬಾಳ್ವೆಯ ಸಂಸ್ಕೃತಿ ಕನ್ನಡ ಭಾಷೆಯದ್ದು ಎಂದು ಹಿರಿಯ ಸಾಹಿತಿ ಡಾ. ರಂಜಾನ್ ದರ್ಗಾ ಹೇಳಿದರು.

ನಗರದ ಮಹಾನಗರ ಪಾಲಿಕೆ ಆವರಣದಲ್ಲಿನ ರಾಧಮ್ಮ ಚನ್ನಗಿರಿ ರಂಗಪ್ಪ ರಂಗಮಂದಿರದಲ್ಲಿ ಮಹಾನಗರ ಪಾಲಿಕೆ, ಕನ್ನಡ ಪರ ಸಂಘ-ಸಂಸ್ಥೆಗಳು ಹಾಗೂ ಪತ್ರಕರ್ತರ ಸಹಯೋಗದಲ್ಲಿ ನಿನ್ನೆ ಹಮ್ಮಿಕೊಂಡಿದ್ದ 68 ನೇ ಕನ್ನಡ ರಾಜ್ಯೋತ್ಸವದ ಸಮಾರೋಪ ಸಮಾರಂಭದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

ಸುಮಾರು ಎರಡೂವರೆ ಸಾವಿರ ವರ್ಷಗಳ ಕಾಲದ ಇತಿಹಾಸವಿರುವ ಕನ್ನಡ ಭಾಷೆ ಸಮೃದ್ಧ ಹಾಗೂ ಶ್ರೀಮಂತ ಭಾಷೆ. ಕನ್ನಡ ಮಾತೆಯನ್ನು ಭಾರತ ಜನನಿಯ ತನುಜಾತೆ ಎಂದು ಹೇಳಲಾಗುತ್ತಿದೆ ಎಂದರು.

ಕನ್ನಡದ ನೆಲದಲ್ಲಿ ಮಹಾಕಾವ್ಯಗಳು ಹುಟ್ಟಿಕೊಂಡಿವೆ. ಮನುಷ್ಯತ್ವದ ತಳಪಾಯದಲ್ಲಿ ಭಾಷಾ ಬೆಳವಣಿಯಾಗಿದೆ. ಯಾರು ಬೇರೆಯವರ ಧರ್ಮವನ್ನು ಗೌರವಿಸುತ್ತಾರೋ, ಯಾರೂ ಬೇರೆಯವರ ವಿಚಾರವನ್ನು ಆಲಿಸಿ, ಮನ್ನಣೆ ಕೊಡುತ್ತಾರೋ ಅವರನ್ನು ಶುದ್ಧ ಬಂಗಾರ ಎಂದು 'ಕವಿರಾಜ ಮಾರ್ಗದಲ್ಲಿ' ಉಲ್ಲೇಖವಾಗಿದೆ ಎಂದು ಹೇಳಿದರು.

ಬಸವಣ್ಣ ಕೇವಲ ಸಮಾಜ ಸುಧಾರಕ ಅಲ್ಲ. ಅವರು ನವ ಸಮಾಜದ ನಿರ್ಮಾಪಕರು. ದುಡಿಯುವ ವರ್ಗದ ಮೊದಲ ಸಂಘಟಕ ಬಸವಣ್ಣ ಎಂದು ಹೇಳಲಾಗುತ್ತಿದೆ. ಪಾರ್ಲಿಮೆಂಟಿನ ಪರಿಕಲ್ಪನೆ ನೀಡಿದವರು ಸಹ ಬಸವಣ್ಣ. ಸಮ ಸಮಾಜ, ಪ್ರಜಾಪ್ರಭುತ್ವದ ಕನಸು ಕಟ್ಟಿಕೊಂಡಿದ್ದವರು ಬಸವಣ್ಣ ಎಂದು ಬಣ್ಣಿಸಿದರು.

ಕನ್ನಡ ದೊಡ್ಡ ಪರಂಪರೆ. ದೇಶದ 15 ಭಾಷೆಗಳ ಪೈಕಿ ಕನ್ನಡ ಕೂಡ ಒಂದು ಧರ್ಮಭಾಷೆಯಾಗಿದೆ. 27 ವಿದೇಶಿ ಭಾಷೆಗಳಲ್ಲಿ ವಚನಗಳ ಅನುವಾದವನ್ನು ಕಾಣುತ್ತೇವೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಮಾತನಾಡಿ, ಇಂಗ್ಲಿಷ್, ಫ್ರೆಂಚ್ ಭಾಷೆ ಹುಟ್ಟುವ ಮುನ್ನವೇ ಕನ್ನಡ ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಯಾಗಿರುವ ಇತಿಹಾಸವನ್ನು ಹೊಂದಿದೆ ಎಂದರು.

ಕರ್ನಾಟಕ, ಕನ್ನಡ ರಾಜ್ಯೋತ್ಸವ ಕೇವಲ ಬಾಹ್ಯ ಆಚರಣೆಯಾಗದೇ ಆಂತರಿಕ ಆಚರಣೆಯಾಗಬೇಕು. ಕನ್ನಡ ಎಲ್ಲರ ಮನದ ಭಾಷೆಯಾಗಬೇಕು. ಕನ್ನಡ ಉಸಿರಾಗಲಿ ಎಂದು ಶುಭ ಹಾರೈಸಿದರು.

ಮುಸ್ಲಿಂ ಧರ್ಮಗುರು ಜೈನಿ ಉಸ್ತಾದ್ ಮಾತನಾಡಿ, ಎರಡೂವರೆ ಸಾವಿರ ವರುಷಗಳ ಪ್ರಾಚೀನ ಇತಿಹಾಸವಿರುವ ಕನ್ನಡದ ಅಸ್ಮಿತೆ, ಅಸ್ತಿತ್ವದ ಬಗ್ಗೆ ಪ್ರತಿಯೊಬ್ಬ ಕನ್ನಡಿಗನೂ ಚಿಂತಿಸುವ ಅಗತ್ಯವಿದೆ. ಇತ್ತೀಚಿನ ದಿನಗಳಲ್ಲಿ ಕನ್ನಡ ಮಾತನಾಡದೇ ಇರುವುದೇ ಅಭಿಮಾನವಾಗಿ ಬಿಟ್ಟಿದೆ ಎಂದು ವಿಷಾದಿಸಿದರು.

ಮೇಯರ್ ವಿನಾಯಕ ಪೈಲ್ವಾನ್ ಅಧ್ಯಕ್ಷತೆ ವಹಿಸಿದ್ದರು. ಇದೇ ವೇಳೆ ಅಂತರರಾಷ್ಟ್ರೀಯ ಕ್ರೀಡಾಪಟುಗಳಾದ ಜೆ.ಎನ್. ಶ್ರೀನಿವಾಸ್, ವೀರೇಶ್ ಪೈಲ್ವಾನ್, ಪತ್ರಕರ್ತರಾದ ಗಣೇಶ್ ಕಮಲಾಪುರ, ಮಧು ನಾಗರಾಜ್, ರಾಮ್‌ಪ್ರಸಾದ್, ಬಿ.ಎಂ. ಶಿವಕುಮಾರ್, ಪುನೀತ್ ಆಪ್ತಿ, ಎಂ. ಗುರುಮೂರ್ತಿ, ಹನುಮಂತರಾವ್, ಜಬೀನಾಖಾನಂ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಯಿತು.

ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್, ಉಪ ಮೇಯರ್ ಯಶೋಧ ಹೆಗ್ಗಪ್ಪ, ಸ್ಥಾಯಿ ಸಮಿತಿ ಅಧ್ಯಕ್ಷರಾದ ಉದಯಕುಮಾರ್, ಮೀನಾಕ್ಷಿ ಜಗದೀಶ್, ಅಹ್ಮದ್ ಕಬೀರ್ ಖಾನ್, ವಿಪಕ್ಷ ನಾಯಕ ಕೆ. ಪ್ರಸನ್ನಕುಮಾರ್, ಮಾಜಿ ಮೇಯರ್ ಎಸ್.ಟಿ. ವೀರೇಶ್, ಸದಸ್ಯರಾದ ಕೆ. ಚಮನ್ ಸಾಬ್, ಅಬ್ದುಲ್ ಲತೀಫ್, ಶಿವಾನಂದ್, ಎ. ನಾಗರಾಜ್, ಆಯುಕ್ತರಾದ ಶ್ರೀಮತಿ ರೇಣುಕಾ, ಹೊರಗುತ್ತಿಗೆ ನೌಕರರ ಸಂಘದ ಅಧ್ಯಕ್ಷ ಎಂ. ವೀರೇಶ್, ಶುಭ ಮಂಗಳ, ಕೆ.ಜಿ. ಶಿವಕುಮಾರ್ ಮತ್ತಿತರರು ಭಾಗವಹಿಸಿದ್ದರು.

# ಶಿಕ್ಷಣ - ಆಸ್ಪತ್ರೆಗಳ ಕಪಿಮುಷ್ಠಿಯಲ್ಲಿ ಸರ್ಕಾರಗಳು

**ಉಚಿತ ಹಾಗೂ ಸಮಾನ ಶಿಕ್ಷಣ - ಆರೋಗ್ಯ ಸೇವೆಯಿಂದ ಮಾತ್ರ ಸಂವಿಧಾನದ ಆಶಯ ಈಡೇರಿಸಲು ಸಾಧ್ಯ : ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ. ಸಂದೇಶ್**

ದಾವಣಗೆರೆ, ನ. 28 - ಸರ್ಕಾರ ಬೇರೆಲ್ಲ ಯೋಜನೆಗಳಿಗಿಂತ ಉಚಿತ ಶಿಕ್ಷಣ ಹಾಗೂ ಆರೋಗ್ಯ ಸೇವೆಗೆ ವ್ಯವಸ್ಥೆ ಮಾಡಬೇಕು. ಇದರಿಂದ ಮಾತ್ರ ಸಂವಿಧಾನದ ಆಶಯಗಳನ್ನು ಈಡೇರಿಸಲು ಸಾಧ್ಯ ಎಂದು ಹೈಕೋರ್ಟ್ ನ್ಯಾ. ಹೆಚ್.ಪಿ. ಸಂದೇಶ್ ತಿಳಿಸಿದರು.

ಶಿಕ್ಷಣ ಇಲಾಖೆ, ಜಿಲ್ಲಾ ವಕೀಲರ ಸಂಘ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಮೇ ಸಾಹಿತ್ಯ ಮೇಳ ಬಳಗ, ಸಂವಿಧಾನಕ್ಕಾಗಿ ನಾವು ಹಾಗೂ ಕಾರ್ಯನಿರತ ಪತ್ರಕರ್ತರ ಸಂಘಗಳ ಸಂಯುಕ್ತಾಶ್ರಯದಲ್ಲಿ ನಗರದ ಬಿಐಇಟಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 'ಪ್ರೌಢಶಾಲಾ ಮಕ್ಕಳತ್ತ ಸಂವಿಧಾನ ಅರಿವಿನ ಯಾನ ಹಾಗೂ ಒಂದು ಸಾವಿರ ಮಕ್ಕಳ ಕೈಗೆ ಮಕ್ಕಳಿಗಾಗಿ ಸಂವಿಧಾನ ಕೃತಿ ಕಾರ್ಯಕ್ರಮ' ಉದ್ಘಾಟಿಸಿ ಅವರು ಮಾತನಾಡಿದರು.

ಜನರ ಬಗ್ಗೆ ಕಾಳಜಿ ಇದ್ದರೆ ಹಾಗೂ ಗಾಂಧೀಜಿ ಕಂಡ ಕಲ್ಯಾಣ ರಾಜ್ಯದ ಕನಸು ನನಸಾಗಬೇಕಾದರೆ ಸಾರ್ವತ್ರಿಕ - ಸಮಾನ ಶಿಕ್ಷಣ ಹಾಗೂ ಸಮಾನ ಆರೋಗ್ಯ ಬೇಕು ಎಂದವರು ಹೇಳಿದರು.

ಆದರೆ, ಶಿಕ್ಷಣ ಹಾಗೂ ಆಸ್ಪತ್ರೆಗಳನ್ನು ನಡೆಸುವವರ ಕಪಿಮುಷ್ಠಿಯಲ್ಲಿ ಸರ್ಕಾರ ಗಳಿವೆ. ಈ ಬಗ್ಗೆ ಚಿಂತನೆ ಮಾಡಬೇಕಾದ ಅಗತ್ಯವಿದೆ. ಒಳ್ಳೆಯ ಹಾಗೂ ಸ್ವಾಸ್ಥ್ಯ ಸಮಾಜ ನಿರ್ಮಿಸಲು ಆರೋಗ್ಯ ಹಾಗೂ ಶಿಕ್ಷಣ ಕೊಡಬೇಕು. ಇವೆರಡನ್ನೂ ಕೊಟ್ಟರೆ ಬೇರೆ ಯಾವುದನ್ನೂ ಕೊಡುವ ಅಗತ್ಯ ಬರುವುದಿಲ್ಲ ಎಂದು ನ್ಯಾಯಮೂರ್ತಿ ಹೇಳಿದರು.

ಈಗ ಏನೆಲ್ಲವನ್ನೂ ಉಚಿತವಾಗಿ ಕೊಡುತ್ತೇನೆ ಎನ್ನುತ್ತಾರೆ. ಆದರೆ, ಶಿಕ್ಷಣ ಮಾತ್ರ ಉಚಿತವಾಗಿ ಕೊಡಲು ಮುಂದೆ ಬರುತ್ತಿಲ್ಲ. ಶಿಕ್ಷಣವನ್ನು ಹೂಡಿಕೆ ಮಾಡಿದ್ದಾರೆ, ಶಿಕ್ಷಣವನ್ನು ವಾಣಿಜ್ಯೀಕರಣ ಮಾಡಿದ್ದಾರೆ ಎಂದವರು ಆಕ್ಷೇಪಿಸಿದರು.

ತಂದೆ - ತಾಯಿಗಳೂ ಸಹ ಮಕ್ಕಳ ಶಿಕ್ಷಣಕ್ಕಾಗಿ ಹೂಡಿಕೆ ಮಾಡಬೇಕು, ಮಕ್ಕಳಿಗೆ ಕೆಲಸ ಸಿಕ್ಕ ನಂತರ ಆ ಹೂಡಿಕೆ ವಾಪಸ್ ಪಡೆಯಬೇಕು ಎಂಬ ಪರಿಸ್ಥಿತಿ ಇದೆ. ಈ ರೀತಿಯ ಶಿಕ್ಷಣ ವ್ಯವಸ್ಥೆ ಕಾರಣದಿಂದ ನಾವು ಜನರಿಂದ ಸೇವೆ ಪಡೆಯುವುದು ಕಷ್ಟವಾಗುತ್ತಿದೆ ಎಂದು ನ್ಯಾಯಮೂರ್ತಿ ಹೇಳಿದರು.

ಶಾಸಕಾಂಗ ರೂಪಿಸುವ ಯಾವುದೇ ಕಾಯ್ದೆಯು ಸಂವಿಧಾನದ ವ್ಯಾಪ್ತಿಯಲ್ಲಿರಬೇಕು ಹಾಗೂ ಸಂವಿಧಾನದ ಆಶಯಗಳಿಗೆ ಅನುಗುಣವಾಗಿರಬೇಕು. ಹೀಗಾಗಿ ಸಂವಿಧಾನ ಒಂದು ರೀತಿಯಲ್ಲಿ ಕಾನೂನುಗಳ ತಾಯಿ ಇದ್ದಂತೆ ಎಂದೂ ನ್ಯಾಯಮೂರ್ತಿ ಸಂದೇಶ್ ಇದೇ ಸಂದರ್ಭದಲ್ಲಿ ತಿಳಿಸಿದರು.

ಭಾರತ ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾಗಿದೆ. ಸಂವಿಧಾನ ಕಟ್ಟುಪಾಡಿನಲ್ಲಿ ವ್ಯವಸ್ಥೆ ಇರುವ ಕಾರಣದಿಂದಾಗಿ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿರಲು ಸಾಧ್ಯವಾಗಿದೆ ಎಂದವರು ಹೇಳಿದರು.

ಸಂವಿಧಾನದ ಆಶಯದಂತೆ ಕಾನೂನುಗಳನ್ನು ರೂಪಿಸಿದರಷ್ಟೇ ಸಾಲದು. ಆ ಕಾನೂನುಗಳನ್ನು ಜಾರಿಗೆ ತರುವ ಇಚ್ಛಾಶಕ್ತಿಯನ್ನು ತೋರಬೇಕಿದೆ ಎಂದು ನ್ಯಾಯಮೂರ್ತಿ ಹೇಳಿದರು.

# ರಿಶಬ್‌ಗೆ ತೀರ್ಪುಗಾರರ ವಿಶೇಷ ಪ್ರಶಸ್ತಿ



**ಹಾಲಿವುಡ್ ತಾರೆ ಡೌಗ್ಲಾಸ್‌ಗೆ ಐ.ಎಫ್. ಎಫ್.ಐ. ಆಜೀವ ಸಾಧನೆ ಪ್ರಶಸ್ತಿ**

ಪಣಜಿ, ನ. 28 – ಹಾಲಿವುಡ್ ತಾರೆ ಮೈಖೆಲ್ ಡೌಗ್ಲಾಸ್ ಅವರಿಗೆ ಆಜೀವ ಸಾಧನೆಗಾಗಿ ಐ.ಎಫ್.ಎಫ್.ಐ.ನ ಸತ್ಯಜಿತ್ ರೇ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ.

ಭಾರತೀಯ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ (ಐ.ಎಫ್.ಎಫ್.ಐ.) ಸಮಾರೋಪ ಸಮಾರಂಭದ ವೇಳೆ ಈ ಘೋಷಣೆ ಮಾಡಲಾಗಿದೆ.

ಜರ್ಮನಿಯ 'ಎಂಡ್ಲೆಸ್ ಬಾರ್ಡರ್ಸ್' ಚಿತ್ರಕ್ಕೆ ಗೋಲ್ಡನ್ ಪೀಕಾಕ್ ಪ್ರಶಸ್ತಿ ಪ್ರಕಟಿಸಲಾಗಿದೆ. ದೀಪಕ್ ಕುಮಾರ್ ಮಿಶ್ರ ಅವರ ನಿರ್ದೇಶನದ ಒ.ಟಿ.ಟಿ. ಸರಣಿಯಾದ 'ಪಂಚಾಯತ್'ಗೆ ಶ್ರೇಷ್ಠ ಒ.ಟಿ.ಟಿ. ಸರಣಿ ಪ್ರಶಸ್ತಿ ನೀಡಲಾಗಿದೆ. ಇದೇ ಮೊದಲ ಬಾರಿಗೆ ಒ.ಟಿ.ಟಿ. ಪ್ರಶಸ್ತಿ ಪ್ರಕಟಿಸಲಾಗಿದೆ. ರಿಶಬ್ ಶೆಟ್ಟಿ ಅವರು ಕನ್ನಡದ 'ಕಾಂತಾರಾ' ಚಿತ್ರಕ್ಕಾಗಿ ತೀರ್ಪುಗಾರರ ವಿಶೇಷ ಪ್ರಶಸ್ತಿಗೆ ಪಾತ್ರರಾದರು. ಬಲ್ಗೇರಿಯಾದ ಚಿತ್ರ ನಿರ್ದೇಶಕ ಸ್ಟೀಫನ್ ಕೊಮಾಂದರೆವ್ ಅವರು 'ಬ್ಲಾಗಾಸ್ ಲೆಸನ್ಸ್' ಚಿತ್ರಕ್ಕಾಗಿ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಪಡೆದರು.

# ಸರ್ಕಾರಿ ಉದ್ಯೋಗಿಗಳ ಸಾಧನಾ ಪ್ರಚಾರ ತಡೆ ಅರ್ಜಿ ಒಪ್ಪದ ಸುಪ್ರೀಂ

ನವದೆಹಲಿ, ನ. 28 - ಸರ್ಕಾರಿ ಉದ್ಯೋಗಿಗಳು ಸರ್ಕಾರದ ಸಾಧನೆಗಳನ್ನು ಪ್ರಚಾರ ಮಾಡಬೇಕು ಎಂದು ಹೊರಡಿಸಿರುವ ಆದೇಶವನ್ನು ಪ್ರಶ್ನಿಸುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದಾಖಲಿಸಿಕೊಳ್ಳಲು ಸುಪ್ರೀಂ ಕೋರ್ಟ್ ನಿರಾಕರಿಸಿದ್ದು, ಇದು ಪ್ರಚಾರ ಹಿತಾಸಕ್ತಿ ಅರ್ಜಿ ಎಂದು ಹೇಳಿದೆ.

ವಕೀಲ ಪ್ರಶಾಂತ್ ಭೂಷಣ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಂಡಿಸಿ, ಸರ್ಕಾರಿ ನೌಕರರನ್ನು ತನ್ನ ಕೆಲಸಗಳ ಪ್ರಚಾರಕ್ಕೆ ಬಳಸಿಕೊಳ್ಳಲು ಕೇಂದ್ರ ಸರ್ಕಾರ ಮುಂದಾಗಿದೆ. ಚುನಾವಣಾ ಉದ್ದೇಶದಿಂದ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು.

ಆದರೆ, ಅರ್ಜಿಯ ವಿಚಾರಣೆಗೆ ಬಯಸದ ಸುಪ್ರೀಂ ಕೋರ್ಟ್, ಈ ಅರ್ಜಿಯನ್ನು ವಾಪಸ್ ತೆಗೆದುಕೊಳ್ಳಲಾಗಿದೆ ಎಂದು ಭಾವಿಸಿ ತಳ್ಳಿ ಹಾಕಲಾಗಿದೆ. ಅರ್ಜಿದಾರರು ಹೈಕೋರ್ಟ್ ಮೊರೆ ಹೋಗಬಹುದು ಎಂದು ಹೇಳಿತು.

ಅಕ್ಟೋಬರ್ 9ರಂದು ರಕ್ಷಣಾ ಸಚಿವಾಲಯದ ಮೂಲಕ ಹೊರಡಿಸಲಾದ ಆದೇಶವನ್ನು ಪ್ರಶ್ನಿಸಿ ಇ.ಎ.ಎಸ್. ಶರ್ಮ ಹಾಗೂ ಜಗದೀಪ್ ಛೋಕರ್ ಎಂಬುವವರು ಅರ್ಜಿ ದಾಖಲಿಸಿದ್ದರು.

# ಹರಿಹರ : ಬೀರೂರು - ಸಮ್ಮಸಗಿ ರಸ್ತೆ ಕಾಮಗಾರಿ ವಿಳಂಬ ವಿರೋಧಿಸಿ ಧರಣಿ



ಹರಿಹರ, ನ.28- ನಗರದ ಹಳೆ ಪಿ.ಬಿ. ರಸ್ತೆ ಕೆ.ಇ.ಬಿ. ಮುಂಭಾಗದ ಬೀರೂರು-ಸಮ್ಮಸಗಿ ರಾಜ್ಯ ಹೆದ್ದಾರಿ, ತುಂಗಭದ್ರಾ ಹೊಸ ಸೇತುವೆ ಸಮೀಪದ ರಸ್ತೆಯು ಸಂಪೂರ್ಣವಾಗಿ ಹದಗೆಟ್ಟು ಹೋಗಿರುವುದರಿಂದ ಸಾರ್ವಜನಿಕರಿಗೂ ವಾಹನ ಸವಾರರು ಪ್ರತಿನಿತ್ಯ ತೊಂದರೆಗಳನ್ನು ಅನುಭವಿಸುತ್ತಿರುವ ಹಿನ್ನೆಲೆಯಲ್ಲಿ ಜಯಕರ್ನಾಟಕ ಸಂಘಟನೆ ಮುಖಂಡ ಗೋವಿಂದ ಊರಮ್ಮ ದೇವಿಯ ದರ್ಶನ ಪಡೆದು ದೇವಸ್ಥಾನದ ಮುಂಭಾಗದಿಂದ ದೀರ್ಘ ದಂಡ ನಮಸ್ಕಾರ (ಉರುಳು ಸೇವೆ) ಹಾಕುವ ಮೂಲಕ ಪ್ರತಿಭಟನೆ ನಡೆಸಿದರು.

ದೀರ್ಘದಂಡ ನಮಸ್ಕಾರವನ್ನು ದೇವಸ್ಥಾನದಿಂದ ಪ್ರಾರಂಭ ಮಾಡಿ ತಾಲ್ಲೂಕು ಕಚೇರಿ ಮುಂಭಾಗದ ಮಾರ್ಗವಾಗಿ ಸಂಚರಿಸಿ ಲೋಕೋಪಯೋಗಿ ಇಲಾಖೆ ಕಚೇರಿವರೆಗೆ ದೀರ್ಘ ನಮಸ್ಕಾರವನ್ನು ಮಾಡಲಾಯಿತು.

ಈ ವೇಳೆ ಮಾತನಾಡಿದ ಜಯಕರ್ನಾಟಕ ಸಂಘಟನೆ ಮುಖಂಡ ಗೋವಿಂದ ಲೋಕೋಪಯೋಗಿ ಇಲಾಖೆಯ ಎಇಇ ಶಿವಮೂರ್ತಿಯವರು ಸರ್ಕಾರದಿಂದ ಎರಡು ಕೋಟಿ ಹಣ ಬಿಡುಗಡೆ ಆದರೂ ಸಹ ಹಾಗೂ ಟೆಂಡರ್ ಪ್ರಕ್ರಿಯೆ ರಸ್ತೆ ಕಾಮಗಾರಿಯನ್ನು ಇದುವರೆಗೂ ಪ್ರಾರಂಭ ಮಾಡಿಲ್ಲ. ಕಾಮಗಾರಿ ವಿಳಂಬ ಮಾಡುತ್ತಿರುವ ಹಿನ್ನೆಲೆಯಲ್ಲಿ ಕಾಮಗಾರಿ ಆರಂಭದವರೆಗೆ ತಾಲ್ಲೂಕು ಕಚೇರಿಯ ಮುಂಭಾಗ ಧರಣಿ ಕೊಡಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಯ ಕರ್ನಾಟಕ ಸಂಘಟನೆಯ ಉಪಾಧ್ಯಕ್ಷ ಆನಂದ್ ಎಂ.ಆರ್, ಪ್ರಧಾನ ಕಾರ್ಯದರ್ಶಿ ಸುನಿಲ್ ಸಿ.ಎಚ್., ಶಬರೀಶ, ಸಂಘಟನಾ ಕಾರ್ಯದರ್ಶಿ ಮಧು ಎಂ, ವಿದ್ಯಾರ್ಥಿ ಘಟಕದ ಅಧ್ಯಕ್ಷ ಶ್ರೀನಿವಾಸ್, ಭರತ್, ಚಂದ್ರಪ್ಪ, ಕೋಳಿಬಳಿಕೆರೆ ಅಪ್ಪು, ಪ್ರದೀಪ್, ಮನು, ರಮೇಶ್, ಗಿರೀಶ್, ಹಾಲೇಶ್, ಹರೀಶ್, ಅರುಣ್, ಬೀರೇಶ್, ರಾಜು, ವಿಜಿ, ಸಮಿವುಲ್ಲಾ, ರಂಗನಾಥ, ಆಕಾಶ್, ಆದರ್ಶ, ಸಂದೀಪ್, ವಿಜಯ, ಚರಣ್, ಎಜಾಸಾ ಅಹ್ಮದ್ ಅಲಿ ಉಪಸ್ಥಿತರಿದ್ದರು.

# ಮಹಿಳೆಯರಿಗಷ್ಟೇ ನರ್ಸಿಂಗ್ ಕೋರ್ಸ್ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲು

ನವದೆಹಲಿ, ನ. 28 - ಕೆಲ ಶಿಕ್ಷಣ ಸಂಸ್ಥೆಗಳ ಬಿ.ಎಸ್.ಸಿ. ಆನರ್ಸ್ ನರ್ಸಿಂಗ್ ಕೋರ್ಸ್‌ಗಳಿಗೆ ಮಹಿಳೆಯರು ಮಾತ್ರವೇ ಅರ್ಜಿ ದಾಖಲಿಸಬಹುದು ಎಂದು ಹೊರಡಿಸಿರುವ ಪ್ರಕಟಣೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ.

ಇಂಡಿಯನ್ ಪ್ರೊಫೆಷನಲ್ ನರ್ಸಸ್ ಅಸೋಸಿಯೇಷನ್ ದಾಖಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದಾಖಲಿಸಿಕೊಂಡಿರುವ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ಹಾಗೂ ನ್ಯಾಯಮೂರ್ತಿ ಮಿನಿ ಪುಷ್ಕರ್ನ ಅವರನ್ನು ಒಳಗೊಂಡ ಪೀಠ, ಕೇಂದ್ರ ಸರ್ಕಾರ ಹಾಗೂ ದೆಹಲಿ ಸರ್ಕಾರಗಳಿಗೆ ನೋಟಿಸ್ ಕಳಿಸಿದೆ.

ಎ.ಐ.ಐ.ಎಂ.ಎಸ್., ಗುರು ಗೋವಿಂದ್ ಸಿಂಗ್ ಇಂದ್ರಪ್ರಸ್ಥ ವಿಶ್ವವಿದ್ಯಾಲಯ ಹಾಗೂ ದೆಹಲಿ ವಿಶ್ವವಿದ್ಯಾಲಯಗಳು ಕೇವಲ ಮಹಿಳೆಯರು ಮಾತ್ರ ಅರ್ಜಿ ದಾಖಲಿಸಬಹುದು ಎಂದು ತಿಳಿಸಿವೆ ಎಂದು ಆಕ್ಷೇಪಿಸಲಾಗಿದೆ.

ದೇಶದಲ್ಲಿ ನರ್ಸ್‌ಗಳ ಕೊರತೆ ಇದೆ. ಈ ಹಿನ್ನೆಲೆಯಲ್ಲಿ ಲಿಂಗ ನಿರ್ಬಂಧ ಹೇರದೇ ಎಲ್ಲರೂ ಅರ್ಜಿ ಸಲ್ಲಿಸಲು ಅನುಮತಿ ನೀಡಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ. ನ್ಯಾಯಾಲಯ ಅರ್ಜಿಯ ವಿಚಾರಣೆಯನ್ನು ಫೆಬ್ರವರಿ 19ರಂದು ಕೈಗೆತ್ತಿಕೊಳ್ಳಲಿದೆ.

# ಸಾಮಾಜಿಕ ಜಾಲತಾಣಗಳ ಮಾಹಿತಿ ಪಿ.ಐ.ಎಲ್.ಗೆ ಆಧಾರವಲ್ಲ : ಹೈಕೋರ್ಟ್

ಮುಂಬೈ, ನ. 28 - ಸಾಮಾಜಿಕ ಜಾಲತಾಣಗಳಲ್ಲಿ ಪಡೆಯಲಾದ ಮಾಹಿತಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ (ಪಿ.ಐ.ಎಲ್.) ಆಧಾರ ಎಂದು ಪರಿಗಣಿಸಲಾಗದು ಎಂದು ಬಾಂಬೆ ಹೈಕೋರ್ಟ್ ತಿಳಿಸಿದೆ.

ಮಹಾರಾಷ್ಟ್ರದಲ್ಲಿ ಪ್ರತಿ ವರ್ಷ ಕಲುಷಿತ ನೀರಿನ ಕಾರಣದಿಂದ 1,500 ರಿಂದ 2,000 ಜನ ಸಾವನ್ನಪ್ಪುತ್ತಿದ್ದಾರೆ ಎಂದು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಲಾಗಿತ್ತು.

ಜನರಿಗೆ ಸುರಕ್ಷಿತೆಯ ನೀರು ಪೂರೈಸಲು ಕ್ರಮ ತೆಗೆದುಕೊಳ್ಳಬೇಕು ಎಂದು ಅರ್ಜಿದಾರರ ಪರವಾಗಿ ವಕೀಲ ಅಜಿತ್ ಸಿಂಗ್ ಘೋರ್ಪಡೆ ಅವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಹಾಗೂ ನ್ಯಾಯಮೂರ್ತಿ ಆರಿಫ್ ಡಾಕ್ಟರ್, ಈ ಮಾಹಿತಿ ಯಾವ ಮೂಲದಿಂದ ದೊರೆತಿದೆ? ಎಂದು ಪ್ರಶ್ನಿಸಿದರು.

ವೃತ್ತಪತ್ರಿಕೆಗಳು ಹಾಗೂ ಸಾಮಾಜಿಕ ಜಾಲತಾಣಗಳ ಪ್ರಕಟಣೆಗಳಿಂದ ಈ ಮಾಹಿತಿ ಪಡೆದಿರುವುದಾಗಿ ಪಾಂಡೆ ಹೇಳಿದರು. ಈ ಅರ್ಜಿ ಅಸ್ಪಷ್ಟವಾಗಿದೆ ಹಾಗೂ ಹಲವಾರು ಮಾಹಿತಿ ಇಲ್ಲ. ಸಾಮಾಜಿಕ ಜಾಲತಾಣಗಳ ಮಾಹಿತಿಗಳು ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಭಾಗವಾಗುವಂತಿಲ್ಲ. ಈ ರೀತಿಯ ಬೇಜವಾಬ್ದಾರಿ ಅರ್ಜಿಗಳ ಮೂಲಕ ನ್ಯಾಯಾಲಯದ ಸಮಯ ಪೋಲು ಮಾಡಲಾಗುತ್ತಿದೆ ಎಂದು ಹೈಕೋರ್ಟ್ ಪೀಠ ತಿಳಿಸಿತು.

# ಸಂಗೀತ, ಚಿತ್ರಕಲಾ, ರಂಗ ಕಲಾ ಶಿಕ್ಷಕರ ನೇಮಕಾತಿಗಾಗಿ ಪ್ರತಿಭಟನೆ




ದಾವಣಗೆರೆ,ನ.28- ಸಂಗೀತ, ಚಿತ್ರಕಲಾ, ರಂಗ ಕಲಾ ಶಿಕ್ಷಕರ ನೇಮಕಾತಿಗಾಗಿ ಆಗ್ರಹಿಸಿ ಎಐಡಿವೈಓ ಸಂಘಟನೆಯಿಂದ ನಗರದ ಜಯದೇವ ವೃತ್ತದಲ್ಲಿ ಇಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಖಾಲಿ ಇರುವ ಸಂಗೀತ, ಚಿತ್ರಕಲೆ, ರಂಗ ಕಲಾ ಶಿಕ್ಷಕರನ್ನು ಕೂಡಲೇ ಭರ್ತಿ ಮಾಡಬೇಕು. ಅಲ್ಪಸಂಖ್ಯಾತ, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಮಾತ್ರವಲ್ಲದೇ ಉಳಿದ ಎಲ್ಲಾ ಸರ್ಕಾರಿ ಶಾಲೆಗಳಿಗೆ ಖಾಯಂ ಆಗಿ ಈ ಎಲ್ಲ ಸಹ ಪಠ್ಯ ವಿಷಯಗಳಿಗೆ ಶಿಕ್ಷಕರನ್ನು ಕೂಡಲೇ ನೇಮಿಸಬೇಕು. ಕಡಿಮೆ ದಾಖಲಾತಿಯ ಕಾರಣಕ್ಕೆ ಈ ಹುದ್ದೆಗಳನ್ನು ರದ್ದುಪಡಿಸುವುದನ್ನು ನಿಲ್ಲಿಸಿ, ಎಲ್ಲಾ ಪ್ರೌಢ ಶಾಲೆಗಳಿಗೂ ಈ ವಿಷಯಗಳಿಗೆ ಖಾಯಂ ಶಿಕ್ಷಕರನ್ನು ನೇಮಕ ಮಾಡುವಂತೆ ಹಕ್ಕೊತ್ತಾಯ ಮಾಡಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಸಂಘಟನೆಯ ಜಿಲ್ಲಾ ಸಂಚಾಲಕ ಪರಶುರಾಮ್ ಮಾತನಾಡಿ, ರಾಜ್ಯದಲ್ಲಿ ಒಟ್ಟು 5240 ಸರ್ಕಾರಿ ಪ್ರೌಢ ಶಾಲೆಗಳಿವೆ. ಅವುಗಳಲ್ಲಿ ಕೆಲಸ ಮಾಡುತ್ತಿರುವ ಈ ಎಲ್ಲಾ ಸಹ ಪಠ್ಯ ವಿಷಯಗಳ ಒಟ್ಟು ಬೋಧಕರ ಸಂಖ್ಯೆ 1500 ನ್ನೂ ದಾಟುವುದಿಲ್ಲ. ಅದರಲ್ಲಿ ಅನೇಕರು ನಿವೃತ್ತಿಯ ಅಂಚಿನಲ್ಲಿದ್ದಾರೆ. ಇನ್ನೂ ಕೆಲವರನ್ನು ಕಡಿಮೆ ದಾಖಲಾತಿಯ ಕಾರಣಕ್ಕೆ ಬೇರೆ ಶಾಲೆಗಳಿಗೆ ವರ್ಗಾಯಿಸಲಾಗುತ್ತಿದೆ ಎಂದರು.

ಪ್ರತೀ ಮಗುವಿಗೂ ಈ ವಿಷಯಗಳಲ್ಲಿ ಅರಿವು, ತರಬೇತಿ ಬೇಕೆಂದ ಮೇಲೆ ಕಡಿಮೆ ದಾಖಲಾತಿಯ ಕಾರಣಕ್ಕೆ ಅಲ್ಲಿಂದ ಶಿಕ್ಷಕರನ್ನು ವರ್ಗಾಯಿಸುವ ಕ್ರಮವೇ ಅವೈಜ್ಞಾನಿಕವಾಗಿದೆ.

2008-09ನೇ ಸಾಲಿನಲ್ಲಿ ಸುಮಾರು 600 ಶಿಕ್ಷಕರನ್ನು ನೇಮಕಾತಿ ಮಾಡಿದ್ದು ಬಿಟ್ಟರೆ ಇದುವರೆಗೆ ಈ ಶಿಕ್ಷಕರ ನೇಮಕಾತಿಗಳೇ ಆಗಿಲ್ಲ. ವಸತಿ ಶಾಲೆಗಳಿಗೆ 2022-23ರಲ್ಲಿ ಕ್ರೈಸ್ ಅಡಿಯಲ್ಲಿ ಸುಮಾರು 1200 ಶಿಕ್ಷಕರ ನೇಮಕವಾಗಿದೆ. ಆದರೆ ಇನ್ನೂ ಬಹುತೇಕ ಶಾಲೆಗಳಿಗೆ ಈ ಶಿಕ್ಷಕರ ನೇಮಕಾತಿ ಆಗಬೇಕಿದೆ.

ಮಕ್ಕಳಿಗೆ ಭಾಷೆ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನಗಳು ಮಾತ್ರವಲ್ಲದೇ ಸಂಗೀತ, ಚಿತ್ರಕಲೆ, ರಂಗ ಕಲೆ ಇವೇ ಮೊದಲಾದ ಲಲಿತ ಕಲೆಗಳೂ ಅವಶ್ಯಕವಾಗಿವೆ. ಆದ್ದರಿಂದ ಈ ಅಂಶವನ್ನು ಸರ್ಕಾರ ತುಂಬಾ ಗಂಭೀರವಾಗಿ ಪರಿಗಣಿಸಬೇಕು.

ಕರ್ನಾಟಕದಲ್ಲಿ ನಿರುದ್ಯೋಗದ ಬೇಗೆಯಲ್ಲಿ ಬೇಯುತ್ತಿರುವ ಸಂಗೀತ, ಚಿತ್ರಕಲೆ, ಮತ್ತು ರಂಗ ಕಲೆಗಳಲ್ಲಿ ಪದವಿ ಪಡೆದವರ ನೇಮಕಾತಿಗಾಗಿ ಕೂಡಲೇ ಅಧಿಸೂಚನೆಯನ್ನು ಹೊರಡಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಸಂಘಟನಾಕಾರರಾದ ಅನಿಲ್ ಕುಮಾರ್, ಗುರು, ರಾಘವೇಂದ್ರ ಹಾಗೂ ದೃಶ್ಯಕಲಾ ಕಾಲೇಜಿನ ಕಾವ್ಯ, ಆರ್ಶಿಯಾ, ಶಿಲ್ಪ, ಸುಶ್ಮಿತಾ, ಲೇಖಕ್, ಗುರುಪ್ರಸಾದ್, ಲಕ್ಷ್ಮಣ್, ಸಬ್ರೀನ್, ಅನುಷಾ, ಗೌತಮ್, ವಿಠಲ್, ನಾಗರಾಜ್ ಪಾಲ್ಗೊಂಡಿದ್ದರು.

**ಸ್ಟಾರ್ ಹೆಲ್ತ್ ಅಂಡ್ ಅಲೈಡ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್**

ದಾವಣಗೆರೆ ಶಾಖಾ ಕಛೇರಿಯ ಸ್ಥಳಾಂತರವನ್ನು
ಕಡ್ಲಿ ಕೊಟ್ರಪ್ಪ ಕಾಂಪ್ಲೆಕ್ಸ್, ನಂ.2670, 3ನೇ ಮಹಡಿ, ಎಂಸಿಸಿ 'ಬಿ' ಬ್ಲಾಕ್
ಬಾಪೂಜಿ ಡೆಂಟಲ್ ಕಾಲೇಜ್ ಎದುರು, ಜೆಜೆಎಂಸಿ ಮುಖ್ಯ ರಸ್ತೆ,
ದಾವಣಗೆರೆ, ಕರ್ನಾಟಕ, ಪಿನ್ ಕೋಡ್: 577004 ರಿಂದ

STAR Health Insurance – The Health Insurance Specialist

**ಶಾಖಾ ಕಛೇರಿಯ ಸ್ಥಳಾಂತರ**

ದಿನಾಂಕ 29.11.2023 ರಿಂದ
ಹೊಸ ವಿಳಾಸದ ಕಚೇರಿಗೆ ಸ್ಥಳಾಂತರಗೊಳ್ಳುತ್ತಿದ್ದೇವೆ
#2033/1P,3P,7P, 1ನೇ ಬಸ್ ನಿಲ್ದಾಣ, ಕೆಫೆ ಕಾಫಿ ಡೇ,
ನೂತನ್ ಕಾಲೇಜು ರಸ್ತೆಯ ಎದುರು, ವಿದ್ಯಾನಗರ, ದಾವಣಗೆರೆ – 577005

## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ರೇವಣಸಿದ್ದಪ್ಪ ಬಿನ್ ಕರಿಬಸಪ್ಪ (ಮೊಬೈಲ್ ನಂ.6360611661. 9008250843) ದೊಡ್ಡಬಾತಿ ದಾವಣಗೆರೆ ತಾಲ್ಲೂಕು ಇವರು ದೊಡ್ಡಬಾತಿ ಗ್ರಾಮದ ವಾಸಿಗಳಾದ ಬಿ.ಜಿ. ಮಂಜುನಾಥ್ ಬಿನ್ ಬಿ.ಜಿ. ರೇವಣಸಿದ್ದಪ್ಪ (ಮೊ. 8747581530) ಇವರಿಂದ ದೊಡ್ಡಬಾತಿ ಗ್ರಾಮದ ಸರಹದ್ದಿಗೆ ಸೇರಿದ ರೇವಣಸಿದ್ದೇಶ್ವರ ದೇವಸ್ಥಾನದ ಹತ್ತಿರ ಇರುವ ಪಂಚಾಯಿತಿ ನಂ. 60/2 ಇ-ಸ್ವತ್ತು ನಂ. 151200201400101892 ಅಳತೆ 28x100 ಅಡಿ ಉಳ್ಳ ಖಾಲಿ ನಿವೇಶನವನ್ನು ಖರೀದಿಸಲು ಇಚ್ಛಿಸಿರುತ್ತಾರೆ. ಆದ ಕಾರಣ ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಯಾರಿಗಾದರೂ ಹಕ್ಕು ಇದ್ದಲ್ಲಿ ಅಥವಾ ತಂಟೆ-ತಕರಾರು ಇದ್ದಲ್ಲಿ ತಮ್ಮ ತಕರಾರನ್ನು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಪ್ರಕಟಣೆಯಾದ 7 ದಿನಗಳೊಳಗಾಗಿ ನನ್ನ ಕಛೇರಿಗೆ ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಲಾಗುವುದು. 7 ದಿನಗಳು ಮುಗಿದ ನಂತರ ಬಂದ ತಕಾರಾರಿಗೆ ಯಾವುದೇ ಮಾನ್ಯತೆ ಇರುವುದಿಲ್ಲ ತಿಳಿಯಿರಿ.

**ಕೆ.ಬಿ. ಶೈಲಾಶ್ರೀ**
**ವಕೀಲರು, #1963/1,2**
**SS ಲೇಔಟ್, ಎ ಬ್ಲಾಕ್,**
**ಒಳಾಂಗಣ ಕ್ರೀಡಾಂಗಣ ಹತ್ತಿರ,**
**ದಾವಣಗೆರೆ.**
**ಮೊ. : 9448658502**

**ಸಹಿ/- ಕೆ.ಬಿ. ಶೈಲಾಶ್ರೀ**
**ಬಿ.ಎಸ್ಸಿ ಎಲ್.ಎಲ್.ಬಿ., ಪಿಜಿಡಿಎಂ**
**ವಕೀಲರು KAR-70/98**

# ಬಹುಧರ್ಮೀಯ ದೇಶಕ್ಕೆ ಆದರ್ಶ ಸಂವಿಧಾನ

## ಹೊನ್ನಾಳಿಯಲ್ಲಿನ 'ಸಂವಿಧಾನ ದಿನ' ಕಾರ್ಯಕ್ರಮದಲ್ಲಿ ಡಾ. ಧನಂಜಯ ಬಿ.ಜಿ



ಹೊನ್ನಾಳಿ,ನ.28- ಭಾರತೀಯ ಸಂವಿಧಾನ ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠ ಸಂವಿಧಾನವಾಗಿದ್ದು, ಇದನ್ನು ರಚಿಸಿದ ಕೀರ್ತಿ 'ಭಾರತ ರತ್ನ' ಡಾ. ಬಿ. ಆರ್ ಅಂಬೇಡ್ಕರ್ ಅವರಿಗೆ ಸಲ್ಲಬೇಕು. ಸಮಸ್ತ ಭಾರತೀಯರು ಸಂವಿಧಾನದ ರಕ್ಷಣೆಯಲ್ಲಿ ಧೈರ್ಯದಿಂದ ಹಾಗೂ ಸ್ವತಂತ್ರವಾಗಿ ಜೀವಿಸುತ್ತಿದ್ದಾರೆ. ಕಳೆದ ಸುಮಾರು ಏಳು ದಶಕಗಳಿಂದ ಸಂವಿಧಾನ, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯ ಮೂಲಕ ಜನಾದೇಶ ಪಡೆದುಕೊಂಡು ದೇಶವನ್ನು ಮುನ್ನಡೆಸಲಾಗುತ್ತಿದೆ ಎಂದು ಪ್ರಾಂಶುಪಾಲ ಡಾ. ಧನಂಜಯ ಬಿ.ಜಿ ಹೇಳಿದರು.

ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆಂತರಿಕ ಗುಣಮಟ್ಟ ಭರವಸಾ ಕೋಶ, ಯುವ ರೆಡ್‌ಕ್ರಾಸ್ ಘಟಕ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಸಾಂಸ್ಕೃತಿಕ, ರಾಷ್ಟ್ರೀಯ ಸೇವಾ ಯೋಜನೆ ಘಟಕ ಗಳ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಸಂವಿಧಾನ ದಿನ' ಕಾರ್ಯಕ್ರಮದಲ್ಲಿ ಸಂವಿಧಾನದ ಪ್ರಸ್ತಾವನೆ ಬೋಧಿಸಿ ಅವರು ಮಾತನಾಡಿದರು.

ಸಮಸ್ತ ಭಾರತೀಯರು ಸಂವಿಧಾನವನ್ನು ಗೌರವಿಸಿ, ಪಾಲಿಸಬೇಕು. ಸಂವಿಧಾನದ ದುರುಪಯೋಗ ಸಲ್ಲದು. ಸಂವಿಧಾನದ ಆಶಯಗಳನ್ನು ಸರಿಯಾಗಿ ಮತ್ತು ವಿವೇಚನೆಯಿಂದ ಅರ್ಥೈಸಿಕೊಳ್ಳಬೇಕು. ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಪ್ರಜಾಪ್ರಭುತ್ವದ ಯಶಸ್ಸು ಸಂವಿಧಾನವನ್ನು ಅವಲಂಬಿಸಿದೆ. ಭಾರತೀಯ ಸಂವಿಧಾನ ರಾಜಕೀಯ ಮುತ್ಸದ್ಧಿಗಳು, ಕಾನೂನು ತಜ್ಞರು, ನ್ಯಾಯವಾದಿಗಳು, ಸಮಾಜ ವಿಜ್ಞಾನಿಗಳು ಮತ್ತು ಎಲ್ಲಾ ಕ್ಷೇತ್ರದ ಬುದ್ಧಿಜೀವಿಗಳು ಪರಸ್ಪರ ಚರ್ಚೆ, ಸಂವಾದ ಮತ್ತು ಸಮಾಲೋಚನೆಯಿಂದ ರೂಪಿಸಿದ್ದಾರೆ.

ವೈವಿಧ್ಯಮಯವಾದ, ಬಹುಧರ್ಮೀಯ ಜನರಿರುವ ಈ ದೇಶಕ್ಕೆ ಆದರ್ಶ ಸಂವಿಧಾನವನ್ನು ರಚಿಸಿದ ಕೀರ್ತಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ. 26 ನವೆಂಬರ್ 1949 ರಂದು ನಮ್ಮನ್ನು ನಾವು ಭಾರತೀಯ ಸಂವಿಧಾನಕ್ಕೆ ಪ್ರಾಂಜಲ ಮನಸ್ಸಿನಿಂದ ಸಮರ್ಪಿಸಿಕೊಂಡಿದ್ದೇವೆ. ಇದುವೇ ಈ ದಿನದ ಹಿರಿಮೆ ಮತ್ತು ಮಹತ್ವವಾಗಿದೆ ಎಂದು ಅವರು ವಿವರಿಸಿದರು.

ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ. ಹರಾಳು ಮಹಾಬಲೇಶ್ವರ ಸ್ವಾಗತಿಸಿದರು. ಯುವ ರೆಡ್ ಕ್ರಾಸ್ ಘಟಕದ ಸಂಚಾಲಕ ಪ್ರೊ. ನಾಗರಾಜ ನಾಯ್ಕ ವಂದಿಸಿದರು. ಪ್ರಥಮ ದರ್ಜೆ ಸಹಾಯಕರಾದ ಕೀರ್ತನ ಪ್ರಾರ್ಥಿಸಿದರು. ಸಂವಿಧಾನ ಕುರಿತು ಕಛೇರಿಯ ಹಿರಿಯ ಸಿಬ್ಬಂದಿ ಹನುಮಂತಪ್ಪ ಹಾಗೂ ಎಂ. ಶಾಂತ ಮಾತನಾಡಿದರು.

# ನಗರ ಪ್ರದೇಶ ಸಂಚಾರ ಸಮಸ್ಯೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಮಾಧಾನ

**ಮೂಲ ಸೌಲಭ್ಯ ಕಲ್ಪಿಸಿ, ಸಂಚಾರ ಒತ್ತಡ ತಗ್ಗಿಸಲು ಅಧಿಕಾರಿಗಳಿಗೆ ಸಿಎಂ ಸೂಚನೆ**

ಬೆಂಗಳೂರು, ನ. 28 - ನಗರ ಪ್ರದೇಶಗಳಲ್ಲಿನ ಸಂಚಾರ ವ್ಯವಸ್ಥೆ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿ, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಅರಮನೆ ಮೈದಾನದಲ್ಲಿ ಆರಂಭವಾದ ಮೂರು ದಿನಗಳ 17 ನೇ ಆವೃತ್ತಿಯ ಮುನಿಸಿಪಾಲಿಕಾ 2023 ಅಂತರರಾಷ್ಟ್ರೀಯ ಸಮ್ಮೇಳನ ಮತ್ತು ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂಚಾರಿ ಒತ್ತಡದಿಂದ ಜನರು ನಗರ ಪ್ರದೇಶಗಳಲ್ಲಿ ರೋಸಿ ಹೋಗಿದ್ದಾರೆ ಎಂದರು.

ಜನರು ನಿತ್ಯ ಅನುಭವಿಸುತ್ತಿರುವ ಕಿರಿ ಕಿರಿ ತಪ್ಪಿಸಿದರೆ ಎಲ್ಲಾ ಮೂಲ ಸೌಲಭ್ಯ ನೀಡಿದಂತೆ. ಮೊದಲು ಈ ಒತ್ತಡ ತಪ್ಪಿಸಲು ಏನು ಕ್ರಮ ಕೈಗೊಳ್ಳುತ್ತೀರೋ ಕೈಗೊಳ್ಳಿ ನಿಮ್ಮ ಜತೆ ನಾವಿದ್ದೇವೆ ಎಂದರು. ರಾಜ್ಯಾದ್ಯಂತ ನಗರ ಪ್ರದೇಶಗಳಲ್ಲಿ ಟ್ರಾಫಿಕ್‌ಒತ್ತಡದಿಂದ ಜನ ಸಂಕಷ್ಟಕ್ಕೊಳಗಾಗಿದ್ದು, ಮೊದಲು ಇದನ್ನು ತಪ್ಪಿಸಬೇಕು. ಟ್ರಾಫಿಕ್ ಒತ್ತಡದಿಂದ ಜನ ಅನುಭವಿಸುತ್ತಿರುವ ಕಿರಿಕಿರಿ ತಪ್ಪಿಸುವುದು, ಮೂಲಭೂತ ಸೌಕರ್ಯಗಳಿಗಾಗಿ ಪರದಾಡುವು ದನ್ನು ತಪ್ಪಿಸುವುದು ಆದ್ಯತೆಯಾಗಬೇಕು ಎಂದು ಕಿವಿ ಮಾತು ಹೇಳಿದ್ದಾರೆ.

2011 ರ ಗಣತಿಯ ಪ್ರಕಾರ, ರಾಜ್ಯದ ಜನಸಂಖ್ಯೆಯ ಶೇ. 38 ರಷ್ಟು ಭಾಗದ ಜನ ನಗರ ಪ್ರದೇಶಗಳಲ್ಲಿದ್ದು, ಈಗ ಇನ್ನೂ ಹೆಚ್ಚಾಗಿದೆ. ಈ ಅಂಶವನ್ನು ಮನಸ್ಸಿನಲ್ಲಿಟ್ಟುಕೊಂಡು ಜನ ಅನುಭವಿಸುತ್ತಿರುವ ಟ್ರಾಫಿಕ್ ಒತ್ತಡವನ್ನು ನಿವಾರಿಸಲು ಕ್ರಮ ಕೈಗೊಳ್ಳಬೇಕು ಎಂದಿದ್ದಾರೆ.

ಇವರೆಲ್ಲರಿಗೂ ಸಂಚಾರ ಒತ್ತಡದ ಕಿರಿಕಿರಿ ಇಲ್ಲದೇ ಸುಗಮ ಸಾರಿಗೆ ವ್ಯವಸ್ಥೆ, ಸುಗಮ ಜೀವನ, ಅಗತ್ಯ ರೀತಿಯಲ್ಲಿ ಕಸ ವಿಲೇವಾರಿ, ಒಳಚರಂಡಿ ವ್ಯವಸ್ಥೆ ಸೇರಿ ನಾಗರಿಕ ಸವಲತ್ತುಗಳನ್ನು ಒದಗಿಸುವುದು ಸವಾಲಿನ ಕೆಲಸ. ಆದರೆ ಇದನ್ನು ಒದಗಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಪ್ರತಿಪಾದಿಸಿದರು.

ನಗರ ಪ್ರದೇಶದ ಹಲವು ಪಟ್ಟಣಗಳ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸಲು ಇತ್ತೀಚೆಗೆ 9 ಸಾವಿರ ಕೋಟಿ ರೂ ನೀಡಲು ಸರ್ಕಾರ ನಿರ್ಧರಿಸಿದೆ. 53 ಪಟ್ಟಣಗಳಿಗೆ ಒಳಚರಂಡಿ ಸೌಲಭ್ಯ ಕಲ್ಪಿಸಲು 1900 ಕೋಟಿ ರೂಪಾಯಿ ಮಂಜೂರು ಮಾಡಲಾಗಿದೆ ಎಂದವರು ಹೇಳಿದರು.

ಜನರ ಜೀವನಮಟ್ಟ ಇನ್ನಷ್ಟು ಸುಗಮಗೊಳಿಸಲು ಅಗತ್ಯ ಇರುವ ಎಲ್ಲಾ ವಲಯಗಳಿಗೂ ಸರ್ಕಾರ ಅಗತ್ಯ ಅನುದಾನವನ್ನು ಒದಗಿಸುತ್ತಿದೆ ಎಂದರು. ಹಿಂದಿನ ಸರ್ಕಾರದಲ್ಲಿ 197 ಇಂದಿರಾ ಕ್ಯಾಂಟಿನ್ ತೆರೆದಿದ್ದು, ಈ ಬಾರಿ ನಾವು ಹೆಚ್ಚುವರಿಯಾಗಿ 188 ಇಂದಿರಾ ಕ್ಯಾಂಟೀನ್‌ಗಳನ್ನು ತೆರೆಯುತ್ತಿದ್ದೇವೆ. ಬೆಲೆ ಏರಿಕೆ ಹೆಚ್ಚಾಗಿದ್ದರೂ ಹಿಂದಿನ ದರದಲ್ಲೇ ಬಡವರು, ಮಧ್ಯಮ ವರ್ಗದವರಿಗೆ ಊಟ-ಉಪಹಾರದ ವ್ಯವಸ್ಥೆ ಕಲ್ಪಿಸಿದ್ದೇವೆ ಎಂದು ವಿವರಿಸಿದರು.

# ಸರ್ಕಾರದ ಸಂವಿಧಾನ ದಿನಾಚರಣೆಯಲ್ಲಿ ಶಾಸಕ ಬಸವಂತಪ್ಪ



ದಾವಣಗೆರೆ, ನ. 28 - ವಿಧಾನಸೌಧದ ಮುಂಭಾಗದಲ್ಲಿ ಸರ್ಕಾರದ ವತಿಯಿಂದ ಸಂವಿಧಾನ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾಯಕೊಂಡದ ಶಾಸಕ ಕೆ.ಎಸ್. ಬಸವಂತಪ್ಪ ಭಾಗವಹಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ.ಮಹಾದೇವಪ್ಪ, ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮಣಿವಣ್ಣನ್, ಕಮಿಷನರ್ ರಾಕೇಶ್ ಸೇರಿದಂತೆ ಅಧಿಕಾರಿಗಳು ಭಾಗವಹಿಸಿದ್ದರು.

# ವಿದ್ಯಾರ್ಥಿಗಳ ಅಸ್ವಸ್ಥ ಪ್ರಕರಣ: ಪ್ರಾಂಶುಪಾಲ, ವಾರ್ಡನ್ ಅಮಾನತ್ತು

(1ನೇ ಪುಟದಿಂದ) ಬಂದಿತ್ತು. ತಕ್ಷಣ ವಿದ್ಯಾರ್ಥಿಗಳನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿತ್ತು. ಅಸ್ವಸ್ಥರಾಗಲು ವಿಷಪೂರಿತ ಆಹಾರ ಸೇವನೆ ಕಾರಣವಾಗಿದ್ದು, ಸರಿಯಾದ ನಿರ್ವಹಣೆ ಮಾಡದಿರುವುದು ಮತ್ತು ಸ್ವಚ್ಛತೆ ಕಾಪಾಡಿಕೊಳ್ಳದಿರುವುದು ಕಾರಣವಾಗಿದ್ದು, ಈ ಘಟನೆಗೆ ವಸತಿ ಶಾಲೆ ಪ್ರಾಂಶುಪಾಲರು ಮತ್ತು ನಿಲಯ ಪಾಲಕಿ ಅವರ ಕರ್ತವ್ಯ ನಿರ್ಲಕ್ಷ್ಯತೆ ಕಾರಣವಾಗಿದೆ ಎಂದು ಪರಿಗಣಿಸಿ ಅಮಾನತ್ತುಗೊಳಿಸಲಾಗಿದೆ.

**ಹೆಚ್ಚುವರಿ ಪ್ರಭಾರ ವ್ಯವಸ್ಥೆ:** ಮಾವಿನಹೊಳೆ ಇಂದಿರಾ ಗಾಂಧಿ ವಸತಿ ಶಾಲೆ ಪ್ರಾಂಶುಪಾಲ ಗುರುಮೂರ್ತ್ಯಪ್ಪ ಇವರಿಗೆ ಹೆಚ್ಚುವರಿ ಪ್ರಭಾರ ವಹಿಸಿಕೊಳ್ಳಲು ಆದೇಶಿಸಲಾಗಿದೆ. ಮತ್ತು ನಿಲಯ ಪಾಲಕರಾಗಿ ಕಾಕನೂರು ವಸತಿ ಶಾಲೆಯ ಅನಿತಾ ಆರ್ ಅವರಿಗೆ ಹೆಚ್ಚುವರಿ ಪ್ರಭಾರದಲ್ಲಿರಿಸಿ ಆದೇಶಿಸಲಾಗಿದೆ.

**ಮೂವರ ಮೇಲೆ ಪ್ರಕರಣ ದಾಖಲು:** ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಂಶುಪಾಲ ಮಂಜುನಾಥ್, ವಾರ್ಡನ ನಸೀಮಾ ಬಾನು ಹಾಗೂ ದಿನಸಿ ಸರಬ ರಾಜು ಮಾಡುವ ಕಂಟ್ರಾಕ್ಟರ್ ಹಾಗೂ ಇತರರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ನೀಡಿರುವ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ. ಎಸ್ಪಿ ಉಮಾ ಪ್ರಶಾಂತ್ ಹಾಗೂ ಸಿಜೆ ಆಸ್ಪತ್ರೆಗೆ ಭೇಟಿ ನೀಡಿ ಮಾಹಿತಿ ಪಡೆದು, ಪ್ರಕರಣದ ತನಿಖೆಗೆ ಸೂಚಿಸಿದ್ದಾರೆ.

# ತೆಲಂಗಾಣ ಜಾಹೀರಾತುಗಳಿಂದ ನೀತಿ ಸಂಹಿತೆ ಉಲ್ಲಂಘನೆಯಾಗಿಲ್ಲ : ಡಿಕೆಶಿ

ಬೆಂಗಳೂರು, ನ. 28 - ತೆಲಂಗಾಣದಲ್ಲಿ ಕರ್ನಾಟಕ ಸರ್ಕಾರ ಪ್ರಕಟಿಸಿರುವ ಜಾಹೀರಾತುಗಳಿಂದ ನೀತಿ ಸಂಹಿತೆ ಉಲ್ಲಂಘನೆಯಾಗಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಕರ್ನಾಟಕ ಸರ್ಕಾರ ತನ್ನ ಅನುಮತಿ ಪಡೆಯದೇ ಜಾಹೀರಾತು ಪ್ರಕಟಿಸುವ ಮೂಲಕ ನಿಯಮ ಉಲ್ಲಂಘಿಸಿದೆ ಎಂದು ಹೇಳಿದ್ದ ಚುನಾವಣಾ ಆಯೋಗ, ಜಾಹೀರಾತು ಪ್ರಕಟಣೆ ನಿಲ್ಲಿಸುವಂತೆ ತಿಳಿಸಿತ್ತು.

ಈ ಬಗ್ಗೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ನಮ್ಮ ಸರ್ಕಾರದ ಜಾಹೀರಾತಿನಲ್ಲಿ ನಮ್ಮ ಸಾಧನೆಗಳನ್ನು ಹೇಳಿಕೊಂಡಿದ್ದೇವೆಯೇ ಹೊರತು ಮತಯಾಚನೆ ಮಾಡಿಲ್ಲ. ಹೀಗಾಗಿ ಇದು ನೀತಿ ಸಂಹಿತೆ ಉಲ್ಲಂಘನೆ ಆಗುವುದಿಲ್ಲ ಎಂದಿದ್ದಾರೆ. ಜಾಹೀರಾತಿನಲ್ಲಿ ಸರ್ಕಾರದ ಕೆಲಸದ ಬಗ್ಗೆ ಮಾಹಿತಿ ಇದೆ. ಕಾಂಗ್ರೆಸ್ ಪಕ್ಷಕ್ಕೆ ಅಥವಾ ಇಂತಹ ಅಭ್ಯರ್ಥಿಗಳಿಗೆ ಮತ ಹಾಕಿ ಎಂದು ಜಾಹಿರಾತಿನಲ್ಲಿ ತಿಳಿಸಿಲ್ಲ. ಇದು ಉಲ್ಲಂಘನೆ ಹೇಗೆ ಆಗುತ್ತದೆ? ಎಂದವರು ಸಮರ್ಥಿಸಿಕೊಂಡಿದ್ದಾರೆ. ಕರ್ನಾಟಕ ಸರ್ಕಾರ ಗ್ಯಾರಂಟಿಗಳನ್ನು ಜಾರಿಗೆ ತಂದಿಲ್ಲ ಎಂದು ಪ್ರತಿಪಕ್ಷಗಳು ಆರೋಪಿಸಿದ್ದವು. ಈ ಬಗ್ಗೆ ಉತ್ತರಿಸಲು ಜಾಹೀರಾತುಗಳನ್ನು ಪ್ರಕಟಿಸಲಾಗಿತ್ತೇ ಹೊರತು ಮತಗಳನ್ನು ಕೇಳಲು ಅಲ್ಲ ಎಂದು ಶಿವಕುಮಾರ್ ಹೇಳಿದ್ದಾರೆ.

ನಾವು ಪತ್ರಿಕೆಗಳಲ್ಲಿ ನೀಡುವ ಜಾಹೀರಾತು ಕೆಲವೊಮ್ಮೆ ತೆಲಂಗಾಣ, ತಮಿಳುನಾಡು ಸೇರಿದಂತೆ ಬೇರೆ ರಾಜ್ಯಗಳಿಗೂ ಹೋಗುತ್ತದೆ. ನಾವು ಮತ ಯಾಚನೆ ಮಾಡಿದ್ದರೆ ಆಗ ನಿಯಮ ಉಲ್ಲಂಘನೆ ಆಗುತ್ತಿತ್ತು. ಚುನಾವಣಾ ಆಯೋಗದ ನೋಟೀಸ್‌ಗೆ ಉತ್ತರ ನೀಡುತ್ತೇವೆ ಎಂದು ತಿಳಿಸಿದರು.

# ಬೇರೆ ಅಧಿಕಾರಿಗಳಿಲ್ಲವೇ?

**ದೆಹಲಿ ಮುಖ್ಯ ಕಾರ್ಯದರ್ಶಿ ಅವಧಿ ವಿಸ್ತರಣೆಗೆ ಸುಪ್ರೀಂ ಪ್ರಶ್ನೆ**

ನವದೆಹಲಿ, ನ. 28 – ದೆಹಲಿ ಮುಖ್ಯ ಕಾರ್ಯದರ್ಶಿ ನವೆಂಬರ್ 30ರಂದು ನಿವೃತ್ತರಾಗಬೇಕಿದ್ದು, ಅವರ ಅವಧಿಯನ್ನು ವಿಸ್ತರಿಸಲು ಬಯಸುವುದಾಗಿ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಒಬ್ಬ ವ್ಯಕ್ತಿಗೇ ಅಂಟಿಕೊಳ್ಳುವುದು ಏಕೆ? ಬೇರೆ ಯಾರೂ ಐ.ಎ.ಎಸ್. ಅಧಿಕಾರಿಗಳು ಇಲ್ಲವೇ? ಎಂದು ಸುಪ್ರೀಂ ಕೋರ್ಟ್ ಟಿಪ್ಪಣಿ ಮಾಡಿದೆ. ಹಾಲಿ ಮುಖ್ಯ ಕಾರ್ಯದರ್ಶಿಯಾಗಿರುವ ನರೇಶ್ ಕುಮಾರ್ ಅವರ ಅವಧಿಯನ್ನು 6 ತಿಂಗಳು ವಿಸ್ತರಿಸುವುದಾಗಿ ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ಹೇಳಿದೆ. ಯಾವ ಆಧಾರದ ಮೇಲೆ ಈ ವಿಸ್ತರಣೆ ಮಾಡಲಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

ಕುಮಾರ್ ಅವರು ನಿವೃತ್ತರಾಗಲು ಬಿಡಬೇಕು ಹಾಗೂ ಹೊಸದಾಗಿ ನೇಮಕ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹೇಳಿದ್ದಾರೆ. ಆದರೆ, ದೆಹಲಿಯ ಮುಖ್ಯ ಕಾರ್ಯದರ್ಶಿ ನೇಮಿಸಲು ಕೇಂದ್ರ ಸರ್ಕಾರಕ್ಕೆ ಅಧಿಕಾರ ಇದೆ. ಈ ವಿಷಯದಲ್ಲಿ ಯಾವುದೇ ತಡೆ ಇಲ್ಲ ಎಂದೂ ಅವರು ಹೇಳಿದ್ದಾರೆ.

ಈ ಬಗ್ಗೆ ಉತ್ತರಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತ, ನಾವು ಒಬ್ಬ ವ್ಯಕ್ತಿಗೆ ಅಂಟಿಕೊಂಡಿಲ್ಲ. ಆಡಳಿತಾತ್ಮಕ ಕಾರಣಗಳಿಗಾಗಿ ವಿಸ್ತರಣೆ ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ.

# ಜಗಳೂರಿನಲ್ಲಿ ಇಂದು ಎಸ್ಸಿ-ಎಸ್ಟಿ ವರದಿಗಾರರ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನೆ

ದಾವಣಗೆರೆ, ನ.28- ರಾಜ್ಯಮಟ್ಟದ ಕರ್ನಾಟಕ ಎಸ್ಸಿ-ಎಸ್ಟಿ ಪತ್ರಿಕಾ ವರದಿಗಾರರ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನೆ ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಾಳೆ ದಿನಾಂಕ 29ರಂದು ಬೆಳಗ್ಗೆ 11.30ಕ್ಕೆ ಜಗಳೂರು ಪಟ್ಟಣದ ಬಯಲು ರಂಗಮಂದಿರದಲ್ಲಿ ನಡೆಯಲಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಹೆಚ್.ಆರ್.ಬಸವರಾಜ್ ತಿಳಿಸಿದ್ದಾರೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಸಮಾರಂಭ ಉದ್ಘಾಟಿಸಲಿದ್ದಾರೆ. ಶಾಸಕ ಬಿ. ದೇವೇಂದ್ರಪ್ಪ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಸಂಸದ ಜಿ.ಎಂ.ಸಿದ್ದೇಶ್ವರ, ಸಚಿವರಾದ ಬಿ. ನಾಗೇಂದ್ರ, ಡಾ.ಹೆಚ್.ಸಿ. ಮಹಾದೇವಪ್ಪ, ಕೆ. ಎನ್.ರಾಜಣ್ಣ, ಕೆ.ಹೆಚ್.ಮುನಿಯಪ್ಪ, ಶಾಸಕರಾದ ಶಾಮನೂರು ಶಿವಶಂಕರಪ್ಪ, ಡಿ.ಜಿ. ಶಾಂತನಗೌಡ, ಮಾಜಿ ಸಚಿವ ಹೆಚ್. ಆಂಜನೇಯ ಸೇರಿದಂತೆ, ಇನ್ನಿತರೆ ಪ್ರಮುಖರು ಭಾಗವಹಿಸುವರು ಎಂದರು.

ಸಮಾರಂಭದಲ್ಲಿ ಹಿರಿಯ ಪತ್ರಕರ್ತರಾದ ಅಬ್ದುಲ್ ವಹಾಬ್, ಎಂ.ಹೆಚ್. ಚೌಡಪ್ಪ, ಎ.ಡಿ. ನಾಗಲಿಂಗಪ್ಪ, ಸುರೇಶ್ ಬಾಬು, ಜಿ.ವೆಂಕಟೇಶ್, ರೋಶನ್, ಎಂ.ಜಿ. ಲಿಂಗರಾಜು, ತಿಪ್ಪೇಸ್ವಾಮಿ ಅವರನ್ನು ಸನ್ಮಾನಿಸಿ ಗೌರವಿಸಲಾಗುವುದು. ಇದೇ ವೇಳೆ ಸರಿಗಮಪ ಖ್ಯಾತಿಯ ಗಾಯಕರಾದ ಕಂಬದ ರಂಗಯ್ಯ ಹಾಗೂ ವಸುಶ್ರೀ ಹಳೇಮನೆ ಅವರಿಂದ ಸಂಗೀತ ಹಬ್ಬ ಹಾಗೂ ಇಪ್ಟಾ ಕಲಾವಿದರಿಂದ ಜಾಗೃತಿ ಗೀತೆ ನಡೆಯಲಿದೆ ಎಂದರು.

ಸಂಘಟನೆಯ ಪದಾಧಿಕಾರಿಗಳಾದ ಎಂ. ರಾಜಪ್ಪ, ಮಾದಿಹಳ್ಳಿ ಕೆ.ಮಂಜಪ್ಪ, ಎ.ಕೆ. ಮಾರಪ್ಪ, ಬಿ.ಒ. ಮಾರುತಿ ಇನ್ನಿತರರು ಇದ್ದರು.

# ಡಿಕೆಶಿ ಪ್ರಕರಣದ ಅನುಮತಿ ವಾಪಸ್ ವಿರುದ್ಧ ಹೈಕೋರ್ಟ್‌ಗೆ ಯತ್ನಾಳ್

ಬೆಂಗಳೂರು, ನ. 28 – ಅಕ್ರಮ ಆಸ್ತಿ ಪ್ರಕರಣದಲ್ಲಿ ಸಿಲುಕಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ರದ್ದುಪಡಿಸಿರುವ ರಾಜ್ಯ ಸರ್ಕಾರದ ಕ್ರಮ ಪ್ರಶ್ನಿಸಿ ಬಿಜೆಪಿ ಮುಖಂಡ ಹಾಗೂ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ.

ಈ ಹಿಂದಿನ ಬಿಜೆಪಿ ಸರ್ಕಾರ ಸಿಬಿಐ ತನಿಖೆಗೆ ಅನುಮತಿ ನೀಡಿತ್ತು. ಈ ಅನುಮತಿಯನ್ನು ರದ್ದುಗೊಳಿಸಬೇಕೆಂದು ಶಿವಕುಮಾರ್ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು. ಈ ಅರ್ಜಿಗೆ ಸಂಬಂಧಿಸಿದಂತೆ ತಮ್ಮನ್ನೂ ಪ್ರತಿವಾದಿ ಮಾಡಿಕೊಳ್ಳಬೇಕೆಂದು ಯತ್ನಾಳ್ ಕೋರಿದ್ದಾರೆ.

ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರ ವಿಭಾಗೀಯ ನ್ಯಾಯಪೀಠ ನಾಳೆ ಬುಧವಾರ ಈ ಬಗ್ಗೆ ವಿಚಾರಣೆ ನಡೆಸಲಿದೆ.

ಶಿವಕುಮಾರ್ ವಿರುದ್ಧದ ತನಿಖೆ ಈಗಾಗಲೇ ಶೇ. 90ರಷ್ಟು ಪೂರ್ಣಗೊಂಡಿದೆ.

ಈ ಹಂತದಲ್ಲಿ ರಾಜ್ಯ ಸರ್ಕಾರ ಸಿಬಿಐಗೆ ನೀಡಿರುವ ಅನುಮೋದನೆ ಹಿಂಪಡೆದಿರುವುದು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

## ಕೋರ್ಟ್‌ಗೆ ಹೋಗಲು ಎಲ್ಲರಿಗೂ ಹಕ್ಕಿದೆ

### ಡಿಕೆಶಿ ಪ್ರಕರಣದಲ್ಲಿ ಯತ್ನಾಳ್ ಹೈಕೋರ್ಟ್ ಅರ್ಜಿಗೆ ಸಿಎಂ ಪ್ರತಿಕ್ರಿಯೆ

ಬೆಂಗಳೂರು, ನ. 28 - ಸರ್ಕಾರದ ತೀರ್ಮಾನವನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಲು ಎಲ್ಲರಿಗೂ ಹಕ್ಕಿದೆ. ಆದರೆ ಅಂತಿಮ ತೀರ್ಮಾನ ನ್ಯಾಯಾಲಯದ್ದೇ ಆಗಿರುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ಅನುಮತಿ ವಾಪಸ್ ಪಡೆದಿರುವುದಕ್ಕೆ ಶಾಸಕ ಬಸವರಾಜ ಯತ್ನಾಳ್ ಅವರು ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುವ ಬಗ್ಗೆ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡುತ್ತಾ, ರಾಜ್ಯ ಸರ್ಕಾರ ಡಿ. ಕೆ.ಶಿವಕುಮಾರ್ ಅವರ ವಿರುದ್ಧ ತನಿಖೆಗೆ ನೀಡಿರುವ ಅನುಮತಿ ಕಾನೂನು ಬಾಹಿರವಾಗಿದ್ದು, ಆದೇಶವನ್ನು ವಾಪಸ್ಸು ಪಡೆದಿದೆ ಎಂದು ಹೇಳಿದರು.

ನಿಗಮ, ಮಂಡಳಿಗಳ ಅಧ್ಯಕ್ಷ ಸ್ಥಾನದ ನೇಮಕಾತಿ ಬಗ್ಗೆ ಗೃಹ ಸಚಿವರು ಅಸಮಧಾನ ಗೊಂಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಅಧ್ಯಕ್ಷರ ನೇಮಕಾತಿಯಲ್ಲಿ ಯಾರ ಅಭಿಪ್ರಾಯವನ್ನೂ ಪಡೆಯಲಾಗಿಲ್ಲ. ಆಯ್ಕೆ ಪ್ರಕ್ರಿಯೆ ಇನ್ನೂ ಪ್ರಾಥಮಿಕ ಹಂತದಲ್ಲಿದೆ. ಆಯ್ಕೆ ಪಟ್ಟಿ ಇನ್ನೂ ಅಂತಿಮವಾಗಿಲ್ಲದಿರುವುದರಿಂದ ಈ ಬಗ್ಗೆ ಪ್ರತಿಕ್ರಿಯೆ ನೀಡುವುದು ಸರಿಯಲ್ಲ ಎಂದರು.

ಶಾಲೆಗಳಿಗೆ ಗುಣಮಟ್ಟದ ಹಾಲಿನ ಪೂರೈಕೆಯಾಗುತ್ತಿಲ್ಲ ಎಂದು ಆರೋಪದ ಹಿನ್ನಲೆಯಲ್ಲಿ ಉತ್ತರಿಸುತ್ತಾ, ಸರ್ಕಾರ ಕೆಎಂಎಫ್‌ನ ನಂದಿನಿ ಗುಣಮಟ್ಟದ ಹಾಲನ್ನು ಪೂರೈಸುತ್ತಿದೆ ಎಂದು ಹೇಳಿದರು.

ತೆಲಂಗಾಣದಲ್ಲಿ ಕರ್ನಾಟಕದ ಸಾಧನೆ ಬಗ್ಗೆ ಮಾಡಿದ ಪ್ರಚಾರದ ಬಗ್ಗೆ ಕೇಂದ್ರ ಚುನಾವಣಾ ಆಯೋಗ ಆಕ್ಷೇಪಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರದ ಸಾಧನೆಗಳ ಪ್ರಚಾರಕ್ಕೆ ಕೇಂದ್ರ ಚುನಾವಣಾ ಆಯೋಗ ಆಕ್ಷೇಪ ವ್ಯಕ್ತಪಡಿಸಿದ್ದು, ಪ್ರಚಾರವನ್ನು ಕೈಬಿಡಲಾಗಿದೆ ಎಂದರು.

# ದಿವ್ಯಾಂಗರಿಗೆ ನೆರವಾಗಲು ತರಬೇತಿ

(1ನೇ ಪುಟದಿಂದ) ಕಾರ್ಯಕರ್ತೆಯರಿಗೆ ಈ ಬಗ್ಗೆ ಅರಿವು ಮೂಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ತಿಳಿಸಿದ್ದಾರೆ. ದಿವ್ಯಾಂಗ ವಿದ್ಯಾರ್ಥಿಗಳನ್ನು ಮುಖ್ಯವಾಹಿನಿಗೆ ಶಾಲೆಗೆ ತರಲು ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಆದ್ಯತೆ ನೀಡಿದೆ ಎಂದೂ ಅವರು ಹೇಳಿದ್ದಾರೆ.


**ಮಣಿಪಾಲ್ ಆರೋಗ್ಯ ಕಾರ್ಡ್**
ರಿನೀವಲ್ ಮತ್ತು ಹೊಸ ಕಾರ್ಡ್ ಮಾಡಿಸಿಕೊಳ್ಳಲು ನವೆಂಬರ್ 30 ಕೊನೆಯ ದಿನಾಂಕ ಹಾಗೂ ಈ ವರ್ಷದ ಕೊನೆಯ ಅವಕಾಶ. ಸಂಪರ್ಕಿಸಿ :
ಮಣಿಪಾಲ್ ಮಾಹಿತಿ ಕೇಂದ್ರ, ತ್ರಿಶೂಲ ಟಾಕೀಸ್ ರಸ್ತೆ, ಕಾವೇರಮ್ಮ ಶಾಲೆಯ ಹತ್ತಿರ, ಕೆ.ಬಿ. ಬಡಾವಣೆ, ದಾವಣಗೆರೆ.
89042 19373

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನ ಹಿಂಭಾಗ ಕಾಡಪ್ಪನವರ ಲೇಔಟ್‌ನಲ್ಲಿ 30x40, 30x40 East ಅಕ್ಕ-ಪಕ್ಕ, 30x40 West, 60x40 East, 30x40 East, Rate - 2600/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಉದ್ಯೋಗಾವಕಾಶ**
ನಮ್ಮ ಸಂಸ್ಥೆಯಿಂದ ಯುವತಿಯರಿಗೆ & ಮಹಿಳೆಯರಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಿ ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್ ಸಂಸ್ಥೆಯಲ್ಲಿ ಉದ್ಯೋಗಾವಕಾಶ ನೀಡಲಾಗುತ್ತದೆ. ಸಂಬಳ, ಉಚಿತ ಊಟ, ವಸತಿಯೊಂದಿಗೆ 15000 ರಿಂದ 30,000, ವಿದ್ಯಾರ್ಹತೆ : 7ನೇ, 10ನೇ, ಪಿಯುಸಿ, ಡಿಗ್ರಿ, ಜಿಎನ್‌ಎಂ., ಎಎನ್‌ಎಂ
91486 83185, 95355 32369

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 East, Rate - 2850/- 30x50 West, 60 ಅಡಿ ರೋಡಿಗಿದೆ, 35 Lakh A/c money ತೆಗೆದುಕೊಳ್ಳುತ್ತಾರೆ. 30x40 East, 30x50 East, 40x60 East.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ನಗರದ ಪ್ಯಾಕೇಜ್ಡ್ ಡ್ರಿಂಕಿಂಗ್ ವಾಟರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು SSLC/PUC ಫೇಲಾದ ಯುವಕರು ಹಾಗೂ ಲೈಸೆನ್ಸ್ ಹೊಂದಿರುವವರು ಡ್ರೈವರ್ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತರು ಖುದ್ದಾಗಿ ಸಂಪರ್ಕಿಸಿ
ಪ್ರತೀಕ್ ಎಂಟರ್ ಪ್ರೈಸಸ್
ನಾಗನೂರು- ಶಾಮನೂರು ರಸ್ತೆ, ಶಾಮನೂರು, ದಾವಣಗೆರೆ.
94481 10287

**ಶಿರ್ಕೆ ಆರೋಗ್ಯ ಸೇವೆಗಳು**
ನಿಮ್ಮ ಆರೋಗ್ಯವೇ ನಮ್ಮ ಗುರಿ
ಇದೀಗ ದಾವಣಗೆರೆಯಲ್ಲಿ ನುರಿತ ಆರೈಕೆದಾರರಿಂದ ನಿಮ್ಮ ಮನೆಯಲ್ಲಿ ಕೈಗೆಟುಕುವ ಬೆಲೆಯಲ್ಲಿ ಸೇವೆ
ಮನೆಯಲ್ಲಿ ಹಾಸಿಗೆ ಹಿಡಿದ ರೋಗಿಗಳಿಗೆ ಕಾಳಜಿ, ಮನೆಯಲ್ಲಿ ಹಿರಿಯರ ಕಾಳಜಿ, ಶಸ್ತ್ರಚಿಕಿತ್ಸೆ, ಸ್ಟ್ರೋಕ್‌ನಿಂದ ಚೇತರಿಸಿಕೊಳ್ಳುತ್ತಿರುವವರಿಗೆ ಕಾಳಜಿ.
ಸಂಪರ್ಕಿಸಿ : 74115 25369

**ಬೇಕಾಗಿದ್ದಾರೆ**
ರಿಸೆಪ್ಷನಿಸ್ಟ್ ಕೆಲಸಕ್ಕೆ ಉತ್ತಮ ಸಂವಹನ ಕೌಶಲ್ಯ ಹೊಂದಿರುವ ಮಹಿಳೆ ಬೇಕಾಗಿದ್ದಾರೆ.
ವಿದ್ಯಾರ್ಹತೆ : ಪಿಯುಸಿ ಅಥವಾ ಡಿಗ್ರಿ ಹೊಂದಿರುವವರು
ಶ್ರೀ ಹರ ಮ್ಯೂಸಿಕಲ್ ವರ್ಲ್ಡ್, ದಾವಣಗೆರೆ
ಸಂಜೆ 4.00 ರಿಂದ ರಾತ್ರಿ 8.30
81977 78488, 80733 92077

**ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗು ಕಾಫಿ ಮಾಡುವವರು ಬೇಕಾಗಿದ್ದಾರೆ.
ಸ್ಥಳ: 1946 ಪ್ರಕಾಶ್ ಕಾಫಿ ವರ್ಕ್ಸ್ ಮಾಮಾಸ್ ಜಾಯಿಂಟ್ ರೋಡ್ ಮತ್ತು ಪ್ರಕಾಶ್ ಕಾಫಿ ವರ್ಕ್ಸ್ ವಿಜಯಲಕ್ಷ್ಮಿ ರಸ್ತೆ
99004 38052, 97401 53513

**ಡ್ರೈವರ್ಸ್ ಬೇಕಾಗಿದ್ದಾರೆ**
ಸ್ಮಾರ್ಟ್ ಸಿಟಿ ಕ್ಯಾಬ್ಸ್
ದಾವಣಗೆರೆ ಕ್ಯಾಬ್
ಡ್ರೈವರ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ :
81233 02057

**ತಕ್ಷಣ ಬೇಕಾಗಿದ್ದಾರೆ**
5th, 7th, 9th, 10th PUC, Degree, ITI Diploma
ಯುವಕ-ಯುವತಿಯರು ಆಫೀಸ್‌ಗಳಿಗೆ, ಶೋ ರೂಂಗಳಿಗೆ, ಬಿಗ್ ಬಜಾರ್ ಕಂಪನಿಗಳಿಗೆ ನೇರ ನೇಮಕಾತಿ.
ಸಂಬಳ : 15,500/- to 40,000/-.
ವಸತಿ, ಊಟವಿದೆ.
ಮೊ : 90361 25229

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು ಬೆಡ್ ರಿಡನ್ ಪೇಷೆಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು.
ಸ್ಪಾಂಜ್ ಬಾತ್ (ಸ್ನಾನ) ಮಾಡಿಸುತ್ತೇವೆ.
85508 36642, 76191 70395

**ಕೆಲಸಕ್ಕೆ ಬೇಕಾಗಿದ್ದಾರೆ**
ಎಸ್.ಆರ್. ಕನ್‌ಸ್ಟ್ರಕ್ಷನ್ಸ್
Tally ಬರುವ ಹಾಗೂ ಯಾವುದೇ ಡಿಗ್ರಿ ಆಗಿರುವ ಕನ್ನಡ, ಹಿಂದಿ, ಇಂಗ್ಲಿಷ್ ಮಾತನಾಡಲು ಮತ್ತು ಕಂಪ್ಯೂಟರ್ ಜ್ಞಾನವಿರುವವರು ಬೇಕಾಗಿದ್ದಾರೆ. ಬೆ. 10ರಿಂದ6
76769 99539

**FOR SALE**
32.5x20.5 (3bhk) and 15.5x20.5 (Duplex) 2nd Main, 1st Cross, PJ Extension, Raithara Beedi, Davangere.
99165 95733
87479 44084

**S.N. Enterprises**
ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಹುಡುಗರು (ಫೀಲ್ಡ್ ವರ್ಕ್ & ಆಫೀಸ್ ಕೆಲಸ) ಹುಡುಗಿಯರು (ಟೆಲಿಕಾಲಿಂಗ್ ಮತ್ತು ಆಫೀಸ್ ಕೆಲಸ) 30 ವರ್ಷದ ಒಳಗಿರುವವರು (Un married) 60feet ರೋಡ್, ನಿಟುವಳ್ಳಿ, ದಾವಣಗೆರೆ.
ಹುಡುಗರು - 72592 66469
ಹುಡುಗಿಯರು - 77601 74883

**ಬೋರ್‌ವೆಲ್ ಪಾಯಿಂಟ್**
ಅಂತರ್ಜಲ ಸಂಶೋಧನೆ (Ground Water)
ಬೋರ್‌ವೆಲ್ ಪಾಯಿಂಟ್‌ಗಾಗಿ
ಸಂಪರ್ಕಿಸಿ
ಎಂ.ಟಿ. ಬಸವರಾಜು ಎಂ.ಎಸ್ಸಿ
ಭೂ ವಿಜ್ಞಾನಿಗಳು
94492 02888, 86608 03384

**HOUSES FOR RENT**
1BHK, 2BHK, 3BHK LIC Colony, Vidyanagara, S.S. Layout, Siddaveerappa indepedent, Car parking.
77955 06795
Dakshith Iyanahalli

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ 15000 (ESI, PF, ಸೌಲಭ್ಯವಿರುತ್ತದೆ) ಸ್ಥಳ: ಮೈಸೂರು.
98450 10281

**ಬೇಕಾಗಿದ್ದಾರೆ**
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆಯಲ್ಲಿರುವ ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ B.A., D.Ed., B.Sc, D.Ed. ಅಥವಾ B.Sc., B.A., B.com ಆಗಿರುವ ತರಬೇತಿ ಪಡೆದ ಶಿಕ್ಷಕಿಯರು ಬೇಕಾಗಿದ್ದಾರೆ.
99640 17729

**ಬೇಕಾಗಿದ್ದಾರೆ**
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಹರ್ಷ ಹಾರ್ಡ್‌ವೇರ್ & ಪೇಂಟ್ಸ್ (Harsha Hardware & Paints)
ಸುಭಾಷ್ ರೋಡ್, ಅಶೋಕ ಚಿತ್ರಮಂದಿರದ ಹತ್ತಿರ, ದಾವಣಗೆರೆ.

**ಬೇಕಾಗಿದ್ದಾರೆ**
Tally ಯಲ್ಲಿ ಪರಿಣಿತಿ ಹೊಂದಿರುವ Tally ಆಪರೇಟರ್ ಬೇಕಾಗಿದ್ದಾರೆ.
ಚಾಮರಾಜಪೇಟೆ, ದಾವಣಗೆರೆ.
91085 45544

**ಬೇಕಾಗಿದ್ದಾರೆ**
S.V. Sales Corporation, Davangere.
* ಅಂಗಡಿಯಲ್ಲಿ ಕೆಲಸ ಮಾಡುವವರು
* ಟಾಟಾ ಏಸ್ ಡ್ರೈವರ್ ಬೇಕಾಗಿದ್ದಾರೆ.
* ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ.
6362023451, 9743437003

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಖಾಲಿ ಸೈಟ್ ಮಾರಾಟಕ್ಕಿದೆ**
ಎಸ್.ಎಸ್. ಬಿ ಬ್ಲಾಕ್‌ನಲ್ಲಿ ಇಂಡೋರ್ ಸ್ಟೇಡಿಯಂ ಹತ್ತಿರ, ಉತ್ತರ ದಿಕ್ಕಿನ 120X60 ಖಾಲಿ ಸೈಟ್ ಮಾರಾಟಕ್ಕಿದೆ.
ಏಜೆಂಟರು
ಎಂ.ಡಿ. ಹಯಾತ್ ಸಾಹೇಬರು
98807 32659


**Site For Sale**
30x40 North West Corner, Behind SS Hi-Tech Hospital, Davangere.
96069 04902

**ಮನೆ ಮಾರಾಟಕ್ಕಿದೆ**
ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಶ್ರೀ ಸಿದ್ದವೀರಪ್ಪ ಬಡಾವಣೆ, 12ನೇ ಕ್ರಾಸ್, 5ನೇ ಮೇನ್, #1978/3, ಶ್ರೀನಿಧಿ 30x50 ನಿವೇಶನದಲ್ಲಿ ನಿರ್ಮಿಸಿರುವ 1200 ಚ. ವಿಸ್ತೀರ್ಣ, 2 BHK ಮನೆ ಮಾರಾಟಕ್ಕಿದೆ.
ಶ್ರೀ ಡಿ. ವೆಂಕಟೇಶ್ ರಾವ್
95357 81770

**0% Interest, EMI Available***
ನಮ್ಮಲ್ಲಿ ಎಲ್ಲಾ ಕಂಪನಿಯ ಮೊಬೈಲ್‌ಗಳು ಕಂತುಗಳ ಮೂಲಕ
* ಆಕರ್ಷಕ ಬೆಲೆಯಲ್ಲಿ ಖರೀದಿಸಬಹುದು.
ಗಣೇಶ್ ಮೊಬೈಲ್ಸ್
ಹದಡಿ ರೋಡ್, ದಾವಣಗೆರೆ.
99807 28444

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ರೈತ ಬಾಂಧವರೇ ಜೀವಾಮೃತ**
ಜವಾರಿ ತಳಿಯ ಆಕಳ ಸಗಣಿ, ಗಂಜಲ, ಸಾವಯವ ಬೆಲ್ಲ ಹಾಗೂ ದ್ವಿದಳ ಧಾನ್ಯದ ಹಿಟ್ಟಿನಿಂದ ವೈಜ್ಞಾನಿಕವಾಗಿ ತಯಾರಿಸಲಾದ ಕೃಷಿ ಮತ್ತು ತೋಟಗಾರಿಕೆ ಎಲ್ಲಾ ಬೆಳೆಗಳಲ್ಲಿ ಉಪಯೋಗಿಸಬಹುದು ಹಾಗೂ ನಮ್ಮಲ್ಲಿ ಅಡಿಕೆ ತೋಟದಲ್ಲಿ ಕಳೆಗಳಿಗೆ ಸ್ಪ್ರೇ ಮಾಡುವ ಸಾವಯವ ಕಳೆನಾಶಕ ದೊರೆಯುತ್ತದೆ.
ಸಂಪರ್ಕಿಸಿ : 98451 04109

**AVAILABLE FOR RENT**
Office / Commercial Space Size : 20x45 Basement, Ground floor & First floor, Address : Lawyer Road, K.B Extesnion, Davanagere.
Contact :
98442 61046, 87225 81400

**ಸೈಟ್ ಮಾರಾಟಕ್ಕಿದೆ**
ಶಾಮನೂರಿನಲ್ಲಿ 20x50 ಅಳತೆಯ ರೆವಿನ್ಯೂ ಸೈಟ್ ಮಾರಾಟಕ್ಕಿದೆ.
ಆಸಕ್ತಿಯಿರುವವರು ಸಂಪರ್ಕಿಸಿ :
98864 39097

**ಬೇಕಾಗಿದ್ದಾರೆ**
ರಿಸೆಪ್ಷನಿಸ್ಟ್ ಮತ್ತು ಡ್ರೈವರ್ ಬೇಕಾಗಿದ್ದಾರೆ.
ಸಂಪರ್ಕಿಸಿ.
87924 53686

**ಮನೆ ಬಾಡಿಗೆಗೆ ಇದೆ**
1BHK, 1st Floor, ವಿನೋಬನಗರ, 3ನೇ ಮೇನ್, 9ನೇ ಕ್ರಾಸ್, ಸಿದ್ದಿ ವಿನಾಯಕ ಶಾಲೆ ಪಕ್ಕ. ಸಂಪರ್ಕಿಸಿ :
98444 13536
99648 33399

**ಬೇಕಾಗಿದ್ದಾರೆ**
ತಕ್ಷಣ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹೆಲ್ಪರ್ ಮತ್ತು ಸೇಲ್ಸ್ ಬಾಯ್ಸ್, ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

**ಬೇಕಾಗಿದ್ದಾರೆ**
ಡೆಲಿವರಿ ಎಕ್ಸಿಕ್ಯೂಟಿವ್ಸ್ (SWIGGY)
ದಿನಕ್ಕೆ 700ರೂ.ಗಳಿಂದ 800/-ರೂ. ವಾರದ ಸಂಬಳ (Weekly Salary)
9741716394, 8431565643

# ಶಾಸನ ಸಭೆಗಳಲ್ಲಿ ಮಸೂದೆ ಮಂಡನೆಗೂ ಮೊದಲು ಚರ್ಚೆಯಾಗಲಿ

**ವಕೀಲರ ಸಂಘದ ಕಾರ್ಯಕ್ರಮದಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ. ಸಂದೇಶ್ ಸಲಹೆ**



ದಾವಣಗೆರೆ, ನ. 28 - ಸರ್ಕಾರ ಶಾಸನ ಸಭೆಗಳಲ್ಲಿ ಹೊಸ ಕಾನೂನು ರಚನೆ ಜಾರಿ ಮಾಡುವಾಗ ಅಥವಾ ತಿದ್ದುಪಡಿ ಸಂದರ್ಭ ಕಾನೂನು ತಜ್ಞರಿಂದ ವಿಶ್ಲೇಷಣಾತ್ಮಕ ಅಧ್ಯಯನ ನಡೆಸಿ, ಅವರ ಸಲಹೆ ಪಡೆಯಬೇಕು ಎಂದು ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ. ಸಂದೇಶ್ ಸಲಹೆ ನೀಡಿದರು.

ಸಂವಿಧಾನ ದಿನಾಚರಣೆ ಅಂಗವಾಗಿ ಜಿಲ್ಲಾ ವಕೀಲರ ಸಂಘದಿಂದ ವಕೀಲರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ನಿನ್ನೆ ಏರ್ಪಡಿಸಿದ್ದ 'ರಾಷ್ಟ್ರ ನಿರ್ಮಾಣದಲ್ಲಿ ವಕೀಲರ ಪಾತ್ರ' ಕುರಿತು ಅವರು ಉಪನ್ಯಾಸ ನೀಡಿದರು.

ಈಗ ರಾಜಕೀಯ ಅಜೆಂಡಾದಿಂದ ಕಾನೂನು ತರಲಾಗುತ್ತಿದೆಯೇ ಹೊರತು ಜನರ ಹಿತದೃಷ್ಟಿ ಯಿಂದ ತರುತ್ತಿಲ್ಲ. ಯಾವುದೇ ಚರ್ಚೆ ಇಲ್ಲದೇ ಈಗಾಗಲೇ ಹಲವು ಮಸೂದೆಗಳು ಮಂಡನೆ ಯಾಗಿವೆ. ಮಸೂದೆಗಳನ್ನು ಭಾಗಿ ಸದನದಲ್ಲಿ ಮಂಡಿಸುವ ಮೊದಲು ಕಾನೂನು ಕಾಲೇಜುಗಳ ಅಧ್ಯಾಪಕರು ಹಾಗೂ ಬಾರ್ ಕೌನ್ಸಿಲ್ ಒಳಗೊಂಡಂತಹ ತಂಡ ರಚಿಸಿ ಅವರಿಂದ ವಿಶ್ಲೇಷಣಾತ್ಮಕ ಅಧ್ಯಯನ ನಡೆಸಬೇಕು. ಚರ್ಚೆಯ ಬಳಿಕ ಅವರ ಸಲಹೆ ಪಡೆಯಬೇಕು. ಇದರಿಂದ ಉತ್ತಮ ಕಾನೂನುಗಳನ್ನು ತರಬಹುದು. ವಕೀಲರು ಇದರಲ್ಲಿ ಭಾಗಿಯಾಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಜಾತಿ, ಅಪರಾಧ, ಭ್ರಷ್ಟಾಚಾರ ಸಮಾಜಕ್ಕೆ ಮೂರು ಶಾಪಗಳಾಗಿದ್ದು, ಜನರು ಮತ ಚಲಾಯಿಸುವಾಗ ಇವುಗಳಿಂದ ದೂರ ಇರಬೇಕು. ಇಂದು ರಾಜಕೀಯದಲ್ಲಿ ಮೌಲ್ಯಗಳು ಇಲ್ಲವಾಗಿದ್ದು, ರಾಷ್ಟ್ರ ನಿರ್ಮಾಣಕ್ಕಾಗಿ ತನು, ಮನ, ಧನಗಳನ್ನು ಅರ್ಪಿಸುವ ಲಾಲ್‌ಬಹದ್ದೂರ್ ಶಾಸ್ತ್ರಿ ಹಾಗೂ ಅಟಲ್‌ಬಿಹಾರಿ ವಾಜಪೇಯಿ ಅವರಂತಹ ರಾಜನೀತಿಜ್ಞರು ಇಂದು ಬೇಕಾಗಿದ್ದಾರೆ ಎಂದು ಹೇಳಿದರು.

ಯುವ ವಕೀಲರಲ್ಲಿ ಕೆಲಸದ ಸಂಸ್ಕೃತಿ ಕೊರತೆ ಎದ್ದು ಕಾಣುತ್ತಿದ್ದು, ಕಕ್ಷಿದಾರರಿಗೆ ನಿಮ್ಮ ಮೇಲೆ ನಂಬಿಕೆ ಬರಬೇಕಾದರೆ ಶ್ರಮ ಸಂಸ್ಕೃತಿ ರೂಢಿಸಿ ಕೊಳ್ಳಬೇಕು. ಕಕ್ಷಿದಾರರೇ ವಕೀಲರಿಗೆ ಅನ್ನದಾತ ರಾಗಿದ್ದು, ಅವರು ಹಣದ ಜೊತೆಗೆ ಜ್ಞಾನವನ್ನೂ ನೀಡುತ್ತಾರೆ. ಪ್ರಕರಣಗಳನ್ನು ಅಧ್ಯಯನ ಮಾಡಿ ಅವರಿಗೆ ನ್ಯಾಯ ದೊರಕಿಸಿಕೊಡಬೇಕು. ಹಿರಿಯ ವಕೀಲರು ಕಿರಿಯರಿಗೆ ಮಾರ್ಗದರ್ಶನ ನೀಡಬೇಕು ಎಂದು ಸಲಹೆ ನೀಡಿದರು.

ವಕೀಲರು ವೈಯಕ್ತಿಕ ಬದುಕಿನ ಜೊತೆ ಸಮಾಜಮುಖಿಯಾಗಿ ಕೆಲಸ ಮಾಡಬೇಕು. ಕಕ್ಷಿದಾರರಿಗೆ ನ್ಯಾಯ ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಸತ್ಯವನ್ನು ಹುಡುಕುವ ಕೆಲಸ ಮಾಡಬೇಕು. ಸಂಘ-ಸಂಸ್ಥೆಗಳು, ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ಸಂವಿಧಾನದ ಬಗ್ಗೆ ಉಪನ್ಯಾಸ ನೀಡಿ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ದೇಶದಲ್ಲಿ ನ್ಯಾಯಾಂಗ ವ್ಯವಸ್ಥೆ ಕ್ರಿಯಾಶೀಲವಾಗಿದ್ದು, ಸುಭದ್ರ ರಾಷ್ಟ್ರ ನಿರ್ಮಾಣ ಮಾಡುವಲ್ಲಿ ವಕೀಲರ ಪಾತ್ರ ದೊಡ್ಡದು. ನನ್ನ ದೇಶ ನನ್ನ ಆತ್ಮ ಎಂಬ ಭಾವನೆ ಬಂದಾಗ ಉತ್ತಮ ರಾಷ್ಟ್ರ ನಿರ್ಮಾಣ ಮಾಡಲು ಸಾಧ್ಯ. ಗಾಂಧೀಜಿ ಬ್ರಿಟೀಷರ ವಿರುದ್ಧ ಹೋರಾಟ ಮಾಡುವಾಗ ವಕೀಲರ ಸೈನ್ಯವೇ ಇತ್ತು ಎಂದು ಸ್ಮರಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಅವರು, ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಲು ಶಾಸಕಾಂಗ ಮತ್ತು ಕಾರ್ಯಾಂಗಗಳು ಸಮರ್ಪಕವಾಗಿ ಕೆಲಸ ಮಾಡಲು ನ್ಯಾಯಾಂಗದ ಪಾತ್ರ ಬಹುಮುಖ್ಯವಾಗಿದೆ. ನ್ಯಾಯಾಂಗ ಸಂಸ್ಥೆಯನ್ನು ಉಳಿಸುವ ಮತ್ತು ಅದರ ಘನತೆಯನ್ನು ಹಾಗೂ ಅಭಿವೃದ್ಧಿ, ಐಕ್ಯತೆ ಕಾಪಾಡುವ ಜವಾಬ್ದಾರಿ ನ್ಯಾಯಾಧೀಶರು ಮತ್ತು ವಕೀಲರ ಕರ್ತವ್ಯವಾಗಿದೆ ಎಂದರು.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಕರೆಣ್ಣನವರ್ ಉಪಸ್ಥಿತರಿದ್ದರು. ಸಂಘದ ಕಾರ್ಯದರ್ಶಿ ಎಸ್.ಬಸವರಾಜು ಕಾರ್ಯಕ್ರಮ ನಿರೂಪಿಸಿದರು. ಉಪಾಧ್ಯಕ್ಷ ಜಿ.ಕೆ. ಬಸವರಾಜ್ ಗೋಪನಾಳ್ ಸ್ವಾಗತಿಸಿದರು. ಸಹ ಕಾರ್ಯದರ್ಶಿ ಎ.ಎಸ್. ಮಂಜುನಾಥ್ ವಂದಿಸಿದರು. ವಕೀಲರಾದ ಭಾವನಾ ಪತಂಗೆ ಪ್ರಾರ್ಥಿಸಿದರು.

ಕಾರ್ಯಕ್ರಮದಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರಾದ ವಾಗೀಶ್ ಕಟಗಿಹಳ್ಳಿ ಮಠ್, ಎಲ್. ನಾಗರಾಜ್, ಸಂತೋಷ್ ಕುಮಾರ್, ನೀಲಕಂಠಯ್ಯ, ಚೌಡಪ್ಪ, ಭಾಗ್ಯಲಕ್ಷ್ಮಿ, ರಘು ಸೇರಿದಂತೆ, ಎಲ್ಲಾ ವಕೀಲರು ಭಾಗವಹಿಸಿದ್ದರು.

## ಹರಿಹರ : ದರ್ಗಾ ಮುಂಭಾಗದ ರಸ್ತೆ ದುರಸ್ತಿಗೆ ಆಗ್ರಹಿಸಿ ಪ್ರತಿಭಟನೆ



ಹರಿಹರ, ನ.28- ನಗರದ ಜಯ ಕರ್ನಾಟಕ ಸಂಘಟನೆ ವತಿಯಿಂದ ದರ್ಗಾ ಮುಂಭಾಗದ ರಸ್ತೆಯನ್ನು ದುರಸ್ತಿಪಡಿಸುವಂತೆ ಆಗ್ರಹಿಸಿ, ಎರಡನೇ ದಿನದ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಈ ವೇಳೆ ಮಾತನಾಡಿದ ಜಯಕರ್ನಾಟಕ ಸಂಘಟನೆಯ ಮುಖಂಡ ಗೋವಿಂದ ಮಾತನಾಡಿ, ಹರಿಹರ ನಗರದ ಕೆ.ಇ.ಬಿ. ಮುಂಭಾಗದ ಬೀರೂರು -ಸಮ್ಮಸಗಿ ರಾಜ್ಯ ಹೆದ್ದಾರಿ ತುಂಗಭದ್ರಾ ಹೊಸ ಸೇತುವೆ ಸಮೀಪದ ರಸ್ತೆಯು ಹದಗೆಟ್ಟು ಹೋಗಿರುವುದರಿಂದ ಸಾರ್ವಜನಿಕರಿಗೆ ಮತ್ತು ವಾಹನ ಸವಾರರರಿಗೆ ಪ್ರತಿನಿತ್ಯ ಹಲವಾರು ರೀತಿಯ ತೊಂದರೆಯನ್ನು ಹಲವಾರು ವರ್ಷಗಳಿಂದ ಅನುಭವಿಸುತ್ತಿರುವ ಹಿನ್ನೆಲೆಯಲ್ಲಿ ಕಾಮಗಾರಿ ಆಗುವವರೆಗೂ ಧರಣಿ ಸತ್ಯಾಗ್ರಹ ಮುಂದುವರೆಯುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಅಧ್ಯಕ್ಷ ಗೋವಿಂದ್, ಉಪಾಧ್ಯಕ್ಷ ಎಂ.ಆರ್. ಆನಂದ್, ಪ್ರಧಾನ ಕಾರ್ಯದರ್ಶಿ ಸಿ.ಎಚ್.ಸುನಿಲ್ ಕುಮಾರ್, ಪ್ರದೀಪ್, ಶಿವಶಕ್ತಿ ವಿದ್ಯಾರ್ಥಿ ಘಟಕದ ಅಧ್ಯಕ್ಷ ಎಚ್.ಪಿ. ಶ್ರೀನಿವಾಸ್, ಆಕಾಶ್, ಜೀವನ್, ಗಗನ್, ಪ್ರಜ್ವಲ್, ರವಿ, ಸಿದ್ದೇಶ್, ಸಂತೋಷ್, ಪರಶುರಾಮ್ ಮತ್ತಿತರರು ಉಪಸ್ಥಿತರಿದ್ದರು.

## ರಾಷ್ಟ್ರೀಯ ವೆಯ್ಟ್ ಲಿಫ್ಟಿಂಗ್ ಸ್ಪರ್ಧೆ : ಕರಿಬಸಪ್ಪಗೆ ಚಿನ್ನ



ದಾವಣಗೆರೆ, ನ. 28- ಈಚೆಗೆ ಧಾರವಾಡದಲ್ಲಿ ನಡೆದ ರಾಷ್ಟ್ರೀಯ ವೆಯ್ಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ನಗರದ ಬಿ.ವಿ. ಕರಿಬಸಪ್ಪ 73 ಕೆಜಿ. ವಿಭಾಗದಲ್ಲಿ ಭಾಗವಹಿಸಿ ಚಿನ್ನದ ಪದಕ ಪಡೆದಿದ್ದಾರೆ. ಕರಿಬಸಪ್ಪ ಅವರನ್ನು ಕರ್ನಾಟಕ ವೆಯ್ಟ್ ಲಿಫ್ಟಿಂಗ್ ಉಪಾಧ್ಯಕ್ಷ ಹೆಚ್. ಬಸವರಾಜ್, ಜಿಲ್ಲಾ ವೆಯ್ಟ್ ಲಿಫ್ಟಿಂಗ್ ಅಧ್ಯಕ್ಷ ಹೆಚ್. ಮಹೇಶಣ್ಣ, ಮಹಾನಗರ ಪಾಲಿಕೆ ಸದಸ್ಯ ವೀರೇಶ್ ಪೈಲ್ವಾನ್, ಎಸ್.ಕೆ. ಪಾಂಡುರಾಜ್, ಮಹಾನಗರ ಪಾಲಿಕೆ ಜಿಮ್ ತರಬೇತುದಾರ ಹನುಮಂತಪ್ಪ ಅಭಿನಂದಿಸಿದ್ದಾರೆ.

## ನಗರದಲ್ಲಿ ಇಂದು ಜಿಲ್ಲಾ ಕ.ಸಾ.ಪ.ದಿಂದ ವಿಶೇಷ ಉಪನ್ಯಾಸ, ಸಾಂಸ್ಕೃತಿಕ ಕಲರವ

ಕರ್ನಾಟಕ ಸಂಭ್ರಮ - 50ರ ಅಂಗವಾಗಿ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ವರ್ಷಪೂರ್ತಿ ತಿಂಗಳಿಗೊಂದರಂತೆ ನಗರದ ಕುವೆಂಪು ಕನ್ನಡ ಭವನದಲ್ಲಿ 'ವಿಶೇಷ ಉಪನ್ಯಾಸ ಹಾಗೂ ಸಾಂಸ್ಕೃತಿಕ ಕಲರವ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಗೌರವ ಕಾರ್ಯದರ್ಶಿ ಬಿ.ದಿಳ್ಯಪ್ಪ ತಿಳಿಸಿದರು.

ಇಂದು ಸಂಜೆ 5.30 ಘಂಟೆಗೆ ನವೆಂಬರ್ ತಿಂಗಳ ಕಾರ್ಯಕ್ರಮ ನಡೆಯಲಿದ್ದು, ಹಿರಿಯ ಸಾಹಿತಿ ಪ್ರೊ. ಎಸ್.ಬಿ.ರಂಗನಾಥ್ ಕಾರ್ಯಕ್ರಮ ಉದ್ಘಾಟಿಸುವರು. ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಹರಿಹರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಎಸ್.ಎಂ.ಗೌರಮ್ಮ ಕರ್ನಾಟಕ ವೈಭವ ಕುರಿತಾಗಿ ಉಪನ್ಯಾಸ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಪ್ತಗಿರಿ ವಿದ್ಯಾಲಯದ ಮ್ಯಾನೇಜಿಂಗ್ ಟ್ರಸ್ಟಿ ಸಿ. ಶ್ರೀರಾಮಮೂರ್ತಿ ಆಗಮಿಸುವರು. ಸಪ್ತಗಿರಿ ವಿದ್ಯಾಲಯದ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಇರುತ್ತದೆ.

ಕರ್ನಾಟಕ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಟಿ.ಶಿವಶಂಕರ್, ಶಿವಂಗಿ ಶಣ್ಮುರಿ, ಕೆ.ರೂಪ್ಲಾ ನಾಯಕ್ ಹಾಗೂ ಮೌಲಾನಾ ಆಜಾದ್ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಾಂಸ್ಕೃತಿಕ ಸಂಘ ಇವರುಗಳನ್ನು ಗೌರವಿಸಿ ಸನ್ಮಾನಿಸಲಾಗುವುದು ಎಂದು ಜಿಲ್ಲಾ ಕಸಾಪ ಗೌರವ ಕೋಶಾಧ್ಯಕ್ಷ ಕೆ.ರಾಘವೇಂದ್ರ ನಾಯರಿ ವಿವರಿಸಿದ್ದಾರೆ.

## ಶಾಲೆ ಮುಚ್ಚಿಸುವ ಬೆದರಿಕೆ: ಚೇತನ್ ಕನ್ನಡಿಗ, ಇತರರ ಮೇಲೆ ದೂರು ದಾಖಲು

ದಾವಣಗೆರೆ, ನ.28- ಶಾಲೆಯ ಮೇಲೆ ಮೇಲಾಧಿಕಾರಿಗಳಿಗೆ ದೂರು ನೀಡಿ, ಶಾಲೆಯನ್ನು ಮುಚ್ಚಿಸುವುದಾಗಿ ಬೆದರಿಸಿ, ಜೀವ ಬೆದರಿಕೆ ಒಡ್ಡಲಾಗಿದೆ ಎಂದು ಚೇತನ್ ಜಿ. ಅಲಿಯಾಸ್ ಚೇತನ್ ಕನ್ನಡಿಗ, ನಾಗರಾಜ್ ಸುರ್ವೆ, ನೋಷಿನ್ ತಾಜ್, ಶ್ರೇಯಸ್ ಹಾಗೂ ಇತರೆ ಇಬ್ಬರ ಮೇಲೆ ಗಾಂಧಿ ನಗರ ಪೊಲೀಸ್ ಠಾಣೆಯಲ್ಲಿ ಭಾನುವಾರ ದೂರು ದಾಖಲಿಸಲಾಗಿದೆ.

ಸೈಯದ್ ಅಕ್ಬರ್ ಅಲಿ ಎಂಬುವವರು ದೂರು ಸಲ್ಲಿಸಿದ್ದು, ಚೇತನ್ ಕನ್ನಡಿಗ ಐದು ಜನ ಬೆಂಬಲಿಗರೊಂದಿಗೆ 5 ಲಕ್ಷ ರೂ. ಹಣಕ್ಕೆ ಬೇಡಿಕೆ ಇಟ್ಟು, ಕೊಡದಿದ್ದರೆ ಶಾಲೆ ಮುಚ್ಚಿಸುವ ಬೆದರಿಕೆ ಹಾಕಿದ್ದಾರೆ. ಅಲ್ಲದೇ ಜೀವ ಬೆದರಿಕೆಯನ್ನೂ ಹಾಕಿದ್ದಾರೆ ಎಂದು ದೂರಿನಲ್ಲಿ ದಾಖಲಿಸಿದ್ದಾರೆ.

## ಪಾರ್ಟ್‌ಟೈಂ ಕೆಲಸ ಕೊಡುವುದಾಗಿ ಹೇಳಿ 2.85 ಲಕ್ಷ ರೂ. ವಂಚನೆ

ದಾವಣಗೆರೆ, ನ.28- ಆನ್‌ಲೈನ್ ಮೂಲಕ ಪಾರ್ಟ್‌ಟೈಂ ಕೆಲಸ ಮಾಡಿ ದಿನಕ್ಕೆ 3 ಸಾವಿರ ರೂ. ಗಳಿಸಬಹುದೆಂಬ ಅಪರಿಚಿತರ ಸಂದೇಶ ನಂಬಿದ ವ್ಯಕ್ತಿಯೊಬ್ಬ 2.85 ಲಕ್ಷ ರೂ. ಕಳೆದುಕೊಂಡ ಘಟನೆ ನಡೆದಿದೆ.

ನಗರದ ಎಸ್‌ಓಜಿ ಕಾಲೋನಿಯ ಸಾಫ್ಟ್‌ವೇರ್ ಇಂಜಿನಿಯರ್ ವಿನ್ಸೆಂಟ್ ವಂಚನೆಗೊಳಗಾದ ವ್ಯಕ್ತಿಯಾಗಿದ್ದು, ಇವರ ವಾಟ್ಸಾಪ್ ಸಂಖ್ಯೆಗೆ ದಿನಕ್ಕೆ 3 ಸಾವಿರ ರೂ. ಸಂಪಾದಿಸಬಹುದಾದ ಕೆಲಸದ ಬಗ್ಗೆ ಬಂದ ಸಂದೇಶ ನಂಬಿ, ಅವರನ್ನು ಸಂಪರ್ಕಿಸಿದ್ದಾರೆ.

ಗೂಗಲ್ ಕಂಪನಿಯಿಂದ ಕೋಡಿಂಗ್ ಪಾರ್ಟ್ ಟೈಮ್ ವರ್ಕ್ ಕೊಡುತ್ತೇವೆ. 3 ದಿನಗಳಲ್ಲಿ ಪೂರೈಸಿದರೆ 3 ಸಾವಿರ ರೂ. ನೀಡುವುದಾಗಿ ಒಂದು ಲಿಂಕ್ ಕಳುಹಿಸಿದ್ದಾರೆ. ಲಿಂಕ್ ಒತ್ತಿ ಅವರು ನೀಡಿದ ಕೆಲಸ ಮುಗಿಸಿದಾಗ ಅವರಿಗೆ ಜನ ಫೈನಾನ್ಸ್ ಬ್ಯಾಂಕ್ ಖಾತೆಗೆ 9 ಸಾವಿರ ರೂ. ಜಮೆಯಾಗಿದೆ.

ನಂತರ ಅಪರಿಚಿತರು ವಾಟ್ಸಾಪ್ ಕಾಲ್ ಮಾಡಿ ನೀವು ಮಾಡಿದ ಕೆಲಸಕ್ಕೆ 3 ಸಾವಿರ ರೂ. ಕಳುಹಿಸಬೇಕಾಗಿತ್ತು. ಆದರೆ ಹೆಚ್ಚುವರಿ 6 ಸಾವಿರ ರೂ. ಕಳುಹಿಸಿದ್ದು ಅದನ್ನು ವಾಪಾಸ್ ಕಳುಹಿಸುವಂತೆ ವಾಟ್ಸಾಪ್‌ಗೆ ಲಿಂಕ್ ಕಳುಹಿಸಿದ್ದಾರೆ.

ಲಿಂಕ್ ತೆರೆದು ಬ್ಯಾಂಕ್ ಖಾತೆಯ ವಿವರ ತುಂಬಿ ಹಣ ವಾಪಾಸ್ ಕಳುಹಿಸಲು ನಡೆಸಿದ ಪ್ರಯತ್ನ ವಿಫಲವಾಗಿದೆ. ಮತ್ತೆ ತನ್ನ ತಾಯಿ ಹಾಗೂ ಅಕ್ಕನ ಎರಡು ಖಾತೆಗಳ ಮೂಲಕ ವಿವರ ತುಂಬಿ ಹಣ ಹಿಂದುರಿಗಿಸಲು ಪ್ರಯತ್ನಿಸಿದ್ದಾರೆ. ನಂತರ ಅವರು ವಿವರ ತುಂಬಿದ ಮೂರೂ ಖಾತೆಗಳಿಂದ ಒಟ್ಟಾರೆ 2.85 ಲಕ್ಷ ರೂ.ಗಳು ಕಡಿತಗೊಂಡಿದೆ. ತಾವು ವಂಚನೆಗೊಳಗಾಗಿರುವುದು ತಿಳಿದು ಸಿಇಎನ್ ಠಾಣೆಗೆ ದೂರು ದಾಖಲಿಸಿದ್ದಾರೆ.

## ಕನ್ನಡ ಭಾಷೆ ಬದುಕಿಗೆ ಉಸಿರಾಗಲಿ

**ದವನ-ನೂತನ ಪದವಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 68ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಬಿ.ವಾಮದೇವಪ್ಪ ಆಶಯ**



ದಾವಣಗೆರೆ, ನ. 28 - ಸುದೀರ್ಘ ಇತಿಹಾಸ ಸಾಹಿತ್ಯ ಸಂಪತ್ತು, ನೈಸರ್ಗಿಕ ಶ್ರೀಮಂತಿಕೆ ಇರುವ ಕನ್ನಡ ಭಾಷೆ ನಮ್ಮೆಲ್ಲರ ಬದುಕಿಗೆ ಉಸಿರಾಗಲಿ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಆಶಯ ವ್ಯಕ್ತಪಡಿಸಿದರು.

ಅವರು ದವನ-ನೂತನ ಪದವಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 68ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು. ಯಾವುದೇ ಪ್ರಾದೇಶಿಕ ಭಾಷೆಗೆ ಇಷ್ಟೊಂದು ಶ್ರೀಮಂತಿಕೆ ಕನ್ನಡ ಭಾಷೆ ಹೊರತುಪಡಿಸಿ ಕಾಣುವುದಿಲ್ಲ, ದುರ್ದೈವೆಂದರೆ ಮಾತೃಭಾಷೆ ಮಾತನಾಡಲು ಕನ್ನಡಿಗರೇ ಹಿಂದೇಟು ಹಾಕುತ್ತಿದ್ದಾರೆ. ಕನ್ನಡ ಭಾಷೆ ಊಟದ ಭಾಷೆಯಾಗಬೇಕಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ನೂತನ ವಿದ್ಯಾಸಂಸ್ಥೆಯ ಅಧ್ಯಕ್ಷ ಎನ್. ಪರಶುರಾಮನಗೌಡ ಮಾತೃಭಾಷೆ ಜೀವಂತವಾಗಿ ಹೀಗೇ ಉಳಿಯಲು ಕನ್ನಡಿಗರು ಭಾಷಾಭಿಮಾನ ಬೆಳೆಸಿಕೊಳ್ಳಲು ಮುಂದಾಗಬೇಕಿದೆ ಎಂದರು.

ದವನ್ -ನೂತನ ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ಉಚ್ಚರಿಸು ಕನ್ನಡ ಸ್ಪರ್ಧೆ ಮಾಡಲಾಯಿತು. ಸ್ಪರ್ಧೆಯಲ್ಲಿ ಅಕ್ಷರಮಾಲೆ ಸುತ್ತು, ಗಾದೆ ಮಾತು ಸುತ್ತು, ಕನ್ನಡ ಸಂಖ್ಯೆಯ ಸುತ್ತು, ಕಾಗುಣಿತದ ಸುತ್ತು, ಕವಿಯ ಹೆಸರು ಪೂರ್ಣ ಮಾಡುವ ಸುತ್ತು ಹೀಗೆ 5 ಸುತ್ತಿನ ಸ್ಪರ್ಧೆ ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಚೈತ್ರ, ದ್ವಿತೀಯ ಬಹುಮಾನ ಗೌರಿ ತೃತೀಯ ಬಹುಮಾನ ಮಂಜುನಾಥ ಪಡೆದರು.

ಕಾರ್ಯಕ್ರಮದಲ್ಲಿ ದವನ-ನೂತನ ಪದವಿ ಪೂರ್ವ ಕಾಲೇಜು ಉಪ ಪ್ರಾಂಶುಪಾಲರಾದ ಶ್ರೀಮತಿ ಅನಿತಾ ಎನ್, ಕನ್ನಡ ಉಪನ್ಯಾಸಕರಾದ ಕೊಟ್ರಪ್ಪ ಕೆ, ಲಲಿತಾ ಎಸ್.ಕೆ ಉಪಸ್ಥಿತರಿದ್ದರು.

## ಜಿಲ್ಲೆಯ ತೋಟಗಾರಿಕೆ ಇಲಾಖೆಯಲ್ಲಿ ಸಸಿಗಳ ಮಾರಾಟ

ದಾವಣಗೆರೆ, ನ.28- ಜಿಲ್ಲೆಯ ವಿವಿಧ ತೋಟಗಾರಿಕೆ ಕ್ಷೇತ್ರದಲ್ಲಿ ಅಡಿಕೆ ಸಸಿಗಳನ್ನು ಅಭಿವೃದ್ಧಿ ಮಾಡಲಾಗಿದ್ದು, ಸರ್ಕಾರಿ ಮಾರಾಟ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

ಗರಗ ತೋಟಗಾರಿಕೆ ಕ್ಷೇತ್ರದಲ್ಲಿ 5095 (ಕಿರಣ್ ಕುಮಾರ್ ಜಿ.ಎಸ್ ಮೊ. ಸಂ. 9591771724), ಆವರಗೊಳ್ಳ ತೋಟಗಾರಿಕೆ ಕ್ಷೇತ್ರದಲ್ಲಿ 1945 (ಸುನಿಲ್ ಮೊ. ಸಂ. 7899459404), ಕಡರನಾಯಕನಹಳ್ಳಿ ತೋಟಗಾರಿಕೆ ಕ್ಷೇತ್ರದಲ್ಲಿ 1705 (ಅನೂಪ್ ಆರ್. ಚಂದ್, ಮೊ.ಸಂ. 9880806762), ವ್ಯಾಸಗೊಂಡನಹಳ್ಳಿ ತೋಟಗಾರಿಕೆ ಕ್ಷೇತ್ರದಲ್ಲಿ 10000 (ಬಸವರಾಜ. ಮೊ. ಸಂ. 9663670572), ಬಳ್ಳಾಪುರ ತೋಟಗಾರಿಕೆ ಕ್ಷೇತ್ರದಲ್ಲಿ 8000 (ಹರ್ಷ ಬಾಬು ಮೊ.ಸಂ. 8749057112), ಎಕ್ಕೆಗುಂದಿ ತೋಟಗಾರಿಕಾ ಕ್ಷೇತ್ರದಲ್ಲಿ 7456 (ಪ್ರವೀಣ್ ಯಾದವ್ ಮೊ ಸಂ. 9900400406), ಕಚೇರಿ ನರ್ಸರಿಯಲ್ಲಿ 2600 (ಕವಿತಾ ಮೊ ಸಂ 9964065115), ತೋಟಗಾರಿಕೆ ಕ್ಷೇತ್ರದಲ್ಲಿ 35000 (ಗೋವಿಂದ ನಾಯ್ಕ ಮೊ. ಸಂ 944851142) ಲೋಕಲ್ ತಳಿಯ ಅಡಿಕೆ ಸಸಿಗಳು ಒಂದಕ್ಕೆ ರೂ. 25 ರಂತೆ ಲಭ್ಯವಿರುತ್ತದೆ.

ಆಸಕ್ತ ರೈತರು ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಿ ಸಸಿಗಳ ಸದುಪಯೋಗ ಪಡೆದುಕೊಳ್ಳಲು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ) ತಿಳಿಸಿದ್ದಾರೆ.

## ಕರೂರಿನಲ್ಲಿ ಇಂದು ಪಂಚಮಸಾಲಿ ಸಭೆ



ರಾಣೇಬೆನ್ನೂರು ತಾಲ್ಲೂಕು ಕರೂರು ಗ್ರಾಮದಲ್ಲಿ ಇಷ್ಟಲಿಂಗ ಪೂಜೆ ಮಾಡಿ, ಮೀಸಲಾತಿ ಪಡೆಯಲು ಇಂದು ಜಯ ಮೃತ್ಯುಂಜಯ ಶ್ರೀಗಳ ಸಾನ್ನಿಧ್ಯದಲ್ಲಿ ಸಭೆ ನಡೆಯಲಿದ್ದು, ಪಂಚಮಸಾಲಿ ಸಮಾಜದವರು ಆಗಮಿಸುವಂತೆ ರಾಣೇಬೆನ್ನೂರು ತಾಲ್ಲೂಕು ಪಂಚಮಸಾಲಿ ಸಮಾಜದ ಅಧ್ಯಕ್ಷ ಸಿದ್ದಪ್ಪ ಚಿಕ್ಕಬಿದರಿ ಮನವಿ ಮಾಡಿದ್ದಾರೆ.

## ವೀರಶೈವ ಲಿಂಗಾಯತ ಮಹಾಸಭಾ ಅಧಿವೇಶನ : ನಾಳೆ ಹಂದರ ಪೂಜೆ

ದಾವಣಗೆರೆ, ನ. 28- ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ಮಹಾ ಅಧಿವೇಶನ ನಗರದಲ್ಲಿ ನಡೆಯಲಿದ್ದು, ಈ ಕಾರ್ಯಕ್ರಮದ ಸಿದ್ಧತೆಯ ಹಿನ್ನೆಲೆಯಲ್ಲಿ ಪೆಂಡಾಲ್ (ಹಂದರ) ಪೂಜೆಯನ್ನು ಎಂ.ಬಿ.ಎ. ಕಾಲೇಜು ಆವರಣದಲ್ಲಿ ನಾಡಿದ್ದು ದಿನಾಂಕ 30 ರ ಗುರುವಾರ ಮಧ್ಯಾಹ್ನ 1.35 ಕ್ಕೆ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ನೆರವೇರಿಸಲಿದ್ದಾರೆ.

ಮಹಾಸಭಾದ ಪದಾಧಿಕಾರಿಗಳು, ಸದಸ್ಯರು ಹಾಗೂ ಎಲ್ಲಾ ಸಮಿತಿಯ ಸದಸ್ಯರು ಮತ್ತು ಸಮಾಜ ಬಾಂಧವರು ಹಾಜರಾಗಲು ಸಭಾದ ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್ ತಿಳಿಸಿದ್ದಾರೆ.

## ನವರಾಷ್ಟ್ರ ನಿರ್ಮಿಸಲು ನಾವೆಲ್ಲರೂ ಪಾತ್ರವಹಿಸಬೇಕು : ಸಾಧ್ವಿ ದೇವಪ್ರಿಯಾ



ರಾಣೇಬೆನ್ನೂರು, ನ. 28 - ಪ್ರಾಚೀನ, ಸನಾತನ, ವೈಭವಯುತ ಭಾರತೀಯ ಸಂಸ್ಕೃತಿಯ ಮೂಲಕ ನವರಾಷ್ಟ್ರ ನಿರ್ಮಿಸಲು ನಾವೆಲ್ಲರೂ ಮಹತ್ತರ ಪಾತ್ರವಹಿಸಬೇಕು ಎಂದು ಹರಿದ್ವಾರದ ಪತಂಜಲಿ ಯೋಗ ಪೀಠದ ಮುಖ್ಯ ಕೇಂದ್ರೀಯ ಪ್ರಭಾರಿ ಸಾಧ್ವಿ ದೇವಪ್ರಿಯಾ ಹೇಳಿದರು.

ಅವರು ಶ್ರೀ ಸಿದ್ದೇಶ್ವರ ಸಮುದಾಯ ಭವನದಲ್ಲಿ ಪತಂಜಲಿ ಮಹಿಳಾ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು. ಯೋಗ ಭಾರತೀಯ ಸಂಸ್ಕೃತಿಯ ಪ್ರತೀಕ, ದೃಷ್ಟಯೋಗದಿಂದ ಎಲ್ಲರನ್ನು ಪ್ರೀತಿಯಿಂದ ಕಾಣಬೇಕು. ಸಹಜಯೋಗ, ಸೂಕ್ಷ್ಮಯೋಗ ಮಹಿಳೆಯರ ಜೀವನದ ದಿನಚರಿ ಆಗಬೇಕು. ಗುರು ಕೃಪೆಯಿಂದ ಶಾಂತಿ, ನೆಮ್ಮದಿ, ಸಮೃದ್ದಿಯ ಬದುಕು ಪಡೆಯಬೇಕು. ತಾಯಿಯ ಶಕ್ತಿಯನ್ನು ಭಗವತಿ ರೂಪವೆಂದು ಪರಿಗಣಿಸಲಾಗುತ್ತಿದ್ದು, ಮಾತೃ ಶಕ್ತಿಯಿಂದ ಸಂಸ್ಕೃತ ದೇಶ ಕಟ್ಟಲು ಸಾಧ್ಯ ಎಂದು ದೇವಪ್ರಿಯಾ ಹೇಳಿದರು.

ರಾಜ್ಯ ಪ್ರಭಾರಿ ಭವರಲಾಲ ಆರ್ಯ, ಆರತಿ ಕಾನಗೋ, ಅಂಜನಾದೇವಿ ಹಂಪಲಿ, ವಜ್ರೇಶ್ವರಿ ಲದ್ವಾ, ಜ್ಯೋತಿ ಜಂಬಗಿ, ಸೀಮಾಶ್ರೀ ಮತ್ತಿತರರಿದ್ದರು. ದಾವಣಗೆರೆ, ಶಿವಮೊಗ್ಗ, ಹಾವೇರಿ, ಗದಗ, ಬಾಗಲಕೋಟೆ, ಕೊಪ್ಪಳ, ರಾಯಚೂರು ಮುಂತಾದ ಜಿಲ್ಲೆಗಳಿಂದ ಸಾವಿರಾರು ಮಹಿಳೆಯರು ಸಮ್ಮೇಳನದಲ್ಲಿ ಭಾಗಿಯಾಗಿದ್ದರು.

## ತುರ್ಚಘಟ್ಟದಲ್ಲಿ ಇಂದು ಕಸಾಪ ಸಾಹಿತ್ಯೋತ್ಸವ, ದತ್ತಿ ಉಪನ್ಯಾಸ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಇಂದು ಬೆಳಿಗ್ಗೆ 10.30 ಕ್ಕೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಶಾಲಾ-ಕಾಲೇಜ್ ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಹೊಸಬೆಳವನೂರು ಗ್ರಾಮ ಪಂಚಾಯತಿ ಸದಸ್ಯ ಡಿ.ಆರ್. ಶೇಖರಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಎಸ್‌ಡಿಎಂಸಿ ಅಧ್ಯಕ್ಷ ಸಿ.ಎಂ. ನಾಗರಾಜ್ ವಚನ ಸಾಹಿತ್ಯ ಮತ್ತು ಜೀವನ ಮೌಲ್ಯಗಳು' ಕುರಿತು ಕಸಾಪ ತಾಲ್ಲೂಕು ಅಧ್ಯಕ್ಷರಾದ ಸುಮತಿ ಜಯಪ್ಪ ಉಪನ್ಯಾಸ ನೀಡುವರು.

ಮುಖ್ಯ ಅತಿಥಿಗಳಾಗಿ ಹಿರಿಯ ನಾಗರಿಕರ ಬಡಾವಣೆ ಸಂಯೋಜಕ ನವೀನ್, ಟಿ.ಎ. ಆಶು, ರೇವಣಸಿದ್ಧಪ್ಪ ಅಂಗಡಿ, ಷಡಾಕ್ಷರಪ್ಪ ಎಂ. ಬೇತೂರು ಭಾಗವಹಿಸಲಿದ್ದಾರೆ.

**ದತ್ತಿ ಉಪನ್ಯಾಸ:** ತಾಲ್ಲೂಕು ಕಸಾಪ ವತಿಯಿಂದ ಇಂದು ಮಧ್ಯಾಹ್ನ 2 ಗಂಟೆಗೆ ದತ್ತಿ ಉಪನ್ಯಾಸ ನಡೆಸಿಕೊಡದಲಿದ್ದಾರೆ. ಎಸ್.ಟಿ. ಹನುಮಂತಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಬಿ. ಕರಿಬಸಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾದ ಜಲಜಾಕ್ಷಮ್ಮ, ರೇವಣಸಿದ್ಧಪ್ಪ ಅಂಗಡಿ, ನವೀನ್, ಆರ್. ವಿಜಯ್ ಕುಮಾರ್, ಸುಮತಿ ಜಯಪ್ಪ, ಕಲ್ಪನಾ, ಷಡಾಕ್ಷರಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.

## ನಗರದಲ್ಲಿ ಇಂದು ವಚನ ಶಿಬಿರ

ಡಾ. ಪಂಡಿತ್ ಪುಟ್ಟರಾಜ ಗವಾಯಿಗಳವರ ಸೇವಾ ಸಮಿತಿ, ಜಿಲ್ಲಾ ಮಹಿಳಾ ಘಟಕ, ವಚನಾಮೃತ ಬಳಗ ಇವರ ಸಹಯೋಗದಲ್ಲಿ ಇಂದು ಮಧ್ಯಾಹ್ನ 3 ಗಂಟೆಗೆ ವಿನೋಬನಗರದ ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಪ್ರೌಢಶಾಲೆಯಲ್ಲಿ ವಚನ ಶಿಬಿರ, ಮಕ್ಕಳ ದಿನಾಚರಣೆ ಹಾಗೂ ರಾಜ್ಯೋತ್ಸವ ಹಮ್ಮಿಕೊಳ್ಳಲಾಗಿದೆ.

ಸೌಮ್ಯ ಸತೀಶ್ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಎಂ. ಅಶೋಕ್, ಕೆ.ಬಿ.ಪಂಚಾಕ್ಷರಪ್ಪ, ಜಿ.ಎಸ್. ಉಜ್ಜಿನಪ್ಪ, ಪಿ.ಬಿ. ವಿನಾಯಕ ಮತ್ತಿತರರು ಉಪಸ್ಥಿತರಿದ್ದರು.

## ಎಸ್‌ಬಿಸಿ ಕಾಲೇಜಿನಲ್ಲಿ ಇಂದು ರಾಜ್ಯೋತ್ಸವ

ಸುಶೀಲಮ್ಮ ಬಂಕಾಪುರದ ಚನ್ನಬಸಪ್ಪ ಪ್ರಥಮ ದರ್ಜೆ ಮಹಿಳಾ ಕಾಲೇಜ್ ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರದಲ್ಲಿ ಇಂದು ಬೆಳಿಗ್ಗೆ 10.30 ಗಂಟೆಗೆ ಕನ್ನಡ ರಾಜ್ಯೋತ್ಸವ ಆಚರಿಸಲಾಗುವುದು.

ಸಮಾರಂಭದ ಅಧ್ಯಕ್ಷತೆಯನ್ನು ಕಾಲೇಜು ಅಧ್ಯಕ್ಷ ಬಿ.ಸಿ.ಉಮಾಪತಿ ವಹಿಸುವರು. ದಾವಿವಿ ಕುಲಸಚಿವರಾದ ಶ್ರೀಮತಿ ಬಿ.ಬಿ. ಸರೋಜ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜ್ ಪ್ರಾಂಶುಪಾಲ ಡಾ.ಎಂ.ಮಂಜಣ್ಣ, ವಿನಾಯಕ ಎಜುಕೇಷನ್ ಟ್ರಸ್ಟ್ ಸದಸ್ಯರಾದ ಕೆ.ಜೆ. ಸುಗಂಧರಾಜ್, ಎಸ್.ಕೆ.ವೀರಣ್ಣ ಮತ್ತು ಅಥಣಿ ಪ್ರಶಾಂತ್ ಆಗಮಿಸುವರು. ಪ್ರಾಂಶುಪಾಲ ಡಾ.ಕೆ.ಷಣ್ಮುಖ ಪ್ರಾಸ್ತಾವಿಕವಾಗಿ ಮಾತನಾಡುವರು.

## ಹೊನ್ನಾಳಿಗೆ ನಾಳೆ ಬಿಜೆಪಿ ರಾಜ್ಯಾಧ್ಯಕ್ಷ ವಿಜೇಯೇಂದ್ರ, ವಿಪಕ್ಷ ನಾಯಕ ಅಶೋಕ್

ನ್ಯಾಮತಿ, ನ. 28-ನಾಡಿದ್ದು ದಿನಾಂಕ 30 ರ ಗುರುವಾರ ಬೆಳಗ್ಗೆ 9 ಘಂಟೆಗೆ ನೂತನ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ನೂತನ ಪ್ರತಿಪಕ್ಷ ನಾಯಕ ಆರ್. ಅಶೋಕ್ ಅವರು ಸವಳಂಗ ಸರ್ಕಲ್ ಗೆ ಆಗಮಿಸಲಿದ್ದಾರೆಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ತಿಳಿಸಿದ್ದಾರೆ.

## ಯುನೈಟೆಡ್ ಶಾಲೆಯಲ್ಲಿ ಸಂವಿಧಾನ ದಿನ



ದಾವಣಗೆರೆ, ನ.28- ನಗರದ ಯುನೈಟೆಡ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಸಂವಿಧಾನ ಅಂಗೀಕಾರ ದಿನವನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಿ. ದಾದಾಪೀರ್ ಅವರು ಮಾತನಾಡಿ, ಡಾ. ಬಿ.ಆರ್.ಅಂಬೇಡ್ಕರ್ ಅವರ ಜೀವನ ಸಾಧನೆ ಬಗ್ಗೆ ಮಾತನಾಡಿದರು.

ಶಾಲೆಯ ಪ್ರಾಂಶುಪಾಲ ಎಂ.ವಾಸೀಂ ಪಾಷಾ ಅವರು ಸಂವಿಧಾನದ ರಚನೆಯಲ್ಲಿ ಅಂಬೇಡ್ಕರ್ ರವರ ಪಾತ್ರದ ಬಗ್ಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ಶಾಲಾ ಸಂಯೋಜಕರಾದ ಶರ್ಫುನ್ನೀಸಾ ಹಾಗೂ ಶಾಲಾ ಆಡಳಿತ ಅಧಿಕಾರಿಗಳಾದ ಅಶ್ಫಾಕ್ ಅಹಮದ್ ಉಪಸ್ಥಿತರಿದ್ದರು.

## ಸಾಲ ಕೊಡುವುದಾಗಿ ಹೇಳಿ ವಂಚನೆ

ದಾವಣಗೆರೆ, ನ.28- ವೈಯಕ್ತಿಕ ಸಾಲ ಕೊಡುವುದಾಗಿ ಹೇಳಿ 59738 ರೂ.ಗಳನ್ನು ವಂಚಿಸಿದ ಘಟನೆ ಕಳೆದ ನ.14ರಂದು ನಡೆದಿದೆ. ಎಂಸಿಸಿ ಬಿ ಬ್ಲಾಕ್ ವಾಸಿ ಮೆಡಿಕಲ್ ರೆಪ್ ಕೆಲಸ ಮಾಡುವ ಕುಮಾರ್ ಎಸ್.ವಿ. ವಂಚನೆಗೊಳಗಾದ ವ್ಯಕ್ತಿ. ಇವರ ಮೊಬೈಲ್‌ಗೆ ಅಪರಿಚಿತ ವ್ಯಕ್ತಿಯೊಬ್ಬ ವಾಟ್ಸಾಪ್ ಕರೆ ಮಾಡಿ ಉಜ್ಜೀವನ್ ಬ್ಯಾಂಕ್ ಅಧಿಕಾರಿ ಎಂದು ಪರಿಚಯಿಸಿಕೊಂಡು ವೈಯಕ್ತಿಕ ಸಾಲ ಕೊಡುವುದಾಗ ಹೇಳಿ ನಂಬಿಸಿ, ಸಾಲಕ್ಕೆ ವಿವಿಧ ಶುಲ್ಕಗಳ ನೆಪದಲ್ಲಿ 59738 ರೂ. ಪಡೆದಿದ್ದಾನೆ. ನಂತರವೂ ಹಣ ಕೇಳಿದಾಗ ತಾನು ಮೋಸದ ಜಾಲದಲ್ಲಿ ಸಿಲುಕಿರುವುದು ಮನವರಿಕೆಯಾಗಿ ಸಿಇಎನ್ ಅಪರಾಧ ಠಾಣೆಯಲ್ಲಿ ಈ ಕುರಿತು ದೂರು ದಾಖಲಿಸಿದ್ದಾರೆ.

## ಹರಪನಹಳ್ಳಿಯಲ್ಲಿ ಶಿವಶರಣ ಮೇದಾರ ಕೇತೇಶ್ವರ ಜಯಂತೋತ್ಸವ



ಹರಪನಹಳ್ಳಿ, 28. - ಇಲ್ಲಿನ ಮೇದಾರ ಸಮಾಜದ ವತಿಯಿಂದ ಶಿವಶರಣ ಮೇದಾರಕೇತೇಶ್ವರ893ನೇ ಜಯಂತೋತ್ಸವವನ್ನು ಹಡಗಲಿ ರಸ್ತೆಯಲ್ಲಿ ಆಚರಿಸಲಾಯಿತು. ಸಮಾಜದ ಕಾರ್ಯದರ್ಶಿ ಎಂ. ಮಾರುತಿ ಮಾತನಾಡಿ, ನಮಗೆ ನಮ್ಮ ಕುಲದೇವತೆ ನಮ್ಮ ಕುಲ ಗುರುಗಳ ಆಚರಣೆ ಸೂಕ್ತ ಸ್ಥಳವಿಲ್ಲದೆ ಬೀದಿಯಲ್ಲಿ ಆಚರಣೆ ಮಾಡುವ ಅನಿವಾರ್ಯತೆ ಎದುರಾಗಿದೆ. ನಮ್ಮ ಸಮಾಜಕ್ಕೆ ಮಲ್ಲಮ್ಮನ ದೇವಸ್ಥಾನ ಕಟ್ಟಿಸಲು ಸರ್ಕಾರದ ಅಧೀನದಲ್ಲಿರುವ ಯಾವುದಾದರೂ ಒಂದು ಜಾಗವನ್ನು ಮೇದಾರ ಸಮಾಜಕ್ಕೆ ನೀಡಬೇಕೆಂದು ಸ್ಥಳೀಯ ಶಾಸಕರಿಗೆ ಮತ್ತು ಪುರಸಭೆಯವರಿಗೆ ಮನವಿ ಮಾಡಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷ ಕೆ. ಕೃಷ್ಣಪ್ಪ ಉಪಾಧ್ಯಕ್ಷ ಬಸವರಾಜ್ ತಿರುಕಪ್ಪ ಮತ್ತು ಸದಸ್ಯರು ಚಿದಾನಂದ ರಮೇಶ್ ಬಾಬು ನವೀನ್ ಕುಮಾರ್ ರಾಘವೇಂದ್ರ ಮೈಲಾರಪ್ಪ ನಾಗರಾಜ್ ರಾಜು ಸೇರಿದಂತೆ ಇತರರು ಇದ್ದರು.

# ಭಾರತ ಆರ್ಥಿಕ ಶಕ್ತಿಯಾಗುವಲ್ಲಿ ಸಹಕಾರ ಕ್ಷೇತ್ರದ ಪಾತ್ರ ಮಹತ್ತರವಾದುದು

**'ಸಹಕಾರ ರತ್ನ' ಪುರಸ್ಕೃತ ನಿರಂಜನ್ ನಿಶಾನಿಮಠ ಅಭಿನಂದನಾ ಸಮಾರಂಭದಲ್ಲಿ ಹೆಚ್.ಬಿ. ಮಂಜುನಾಥ್**



ದಾವಣಗೆರೆ, ನ. 28- ಭಾರತ ಮಹಾನ್ ಆರ್ಥಿಕ ಶಕ್ತಿಯಾಗುವಲ್ಲಿ ಸಹಕಾರ ಕ್ಷೇತ್ರದ ಪಾತ್ರ ಮಹತ್ತರವಾದುದು ಎಂದು ಹಿರಿಯ ಸಹಕಾರ ಸಂಪನ್ಮೂಲ ವ್ಯಕ್ತಿ ಹೆಚ್.ಬಿ. ಮಂಜುನಾಥ ಹೇಳಿದರು.

ನಗರದ ಡಾ. ಸದ್ಯೋಜಾತ ಸ್ವಾಮೀಜಿ ಹಿರೇಮಠದ ಸಭಾಂಗಣದಲ್ಲಿ ಸಿಟಿ ಸಹಕಾರ ಬ್ಯಾಂಕ್ ವತಿಯಿಂದ ಇಂದು ಸಂಜೆ ಹಮ್ಮಿಕೊಂಡಿದ್ದ ಬ್ಯಾಂಕಿನ ಉಪಾಧ್ಯಕ್ಷ 'ಸಹಕಾರ ರತ್ನ' ಪ್ರಶಸ್ತಿ ಪುರಸ್ಕೃತ ನಿರಂಜನ್ ನಿಶಾನಿಮಠ ಅವರ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

ಬರುವ 2025 ರ ವೇಳೆಗೆ ಭಾರತ ಐದು ಟ್ರಿಲಿಯನ್ ಡಾಲರ್‌ಗಳ ಮಹಾನ್ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಬೇಕಿದ್ದು, ಇದರಲ್ಲಿ ಸಹಕಾರ ರಂಗದ ಪಾತ್ರ ಮಹತ್ತರವಾಗಿದೆ. ಈ ದಿಸೆಯಲ್ಲಿ ಪ್ರತಿಯೊಬ್ಬ ಸಹಕಾರಿಯೂ ಬದ್ಧತೆಯಿಂದ ದುಡಿಯಬೇಕಾಗಿದೆ ಎಂದರು.

ಸ್ವಾತಂತ್ರ್ಯ ಪೂರ್ವದಲ್ಲಿ ದೇಶದಲ್ಲಿ ಕೇವಲ 200 ಸಹಕಾರ ಸಂಸ್ಥಾಪನೆಗಳು ಇದ್ದದ್ದು ಈಗ 855000 ಕ್ಕೂ ಹೆಚ್ಚಾಗಿದೆ. ಆಗ ದೇಶದಲ್ಲಿ ಕೇವಲ 36000 ಸದಸ್ಯತ್ವ ಇದ್ದದ್ದು, ಈಗ ಸುಮಾರು 29 ಕೋಟಿಗೂ ಹೆಚ್ಚಾಗಿದೆ. ಭಾರತದ ಪುರಾಣೋಪನಿಷತ್ತುಗಳಲ್ಲಿ ಸಹಕಾರ ತತ್ವ ವಿಶ್ವದಲ್ಲೇ ಪ್ರಥಮವಾಗಿ ಪ್ರಸ್ತಾಪವಾಗಿದ್ದು, ಪ್ರಸ್ತುತ ಭಾರತದ ಆರ್ಥಿಕ ಶಕ್ತಿ ವರ್ಧನೆಯಲ್ಲಿ ತಮ್ಮ ಪಾತ್ರ ಹಾಗೂ ಜವಾಬ್ದಾರಿ ಏನೆಂಬುದನ್ನು ಅರಿತು ಪ್ರತಿಯೊಬ್ಬ ಸಹಕಾರಿಯೂ ಕಾರ್ಯತತ್ಪರನಾಗಬೇಕಿದ್ದು, ಇವರನ್ನು ಸಂಘಟಿಸಿ, ಮಾರ್ಗದರ್ಶಿಸುವ ಹೊಣೆ ಪ್ರಶಸ್ತಿ ಪುರಸ್ಕೃತರುಗಳ ಮೇಲೆ ಇದೆ ಎಂಬ ಕಿವಿ ಮಾತು ಹೇಳಿದರು.

ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ ಮಾತನಾಡಿ, ನಿಶಾನಿ ಮಠದ ವಂಶಸ್ಥರು ಸದಾ ಸಮಾಜ ಸೇವೆ ಮಾಡುತ್ತಾ ಬಂದಿದ್ದಾರೆ. ಗುರುದೇವ ನಿಶಾನಿಮಠ ಅವರು ಐವತ್ತು-ಅರವತ್ತರ ದಶಕಗಳಲ್ಲಿ ನಗರಸಭೆ ಸದಸ್ಯರಾಗಿ ಹೆಸರು ಮಾಡಿದವರು, ಅದೇ ಸೇವಾ ಮನೋಭಾವದಲ್ಲಿ ನಿರಂಜನ ನಿಶಾನಿ ಮಠ ಹೆಜ್ಜೆ ಇಟ್ಟು ತಮ್ಮ ವಂಶಸ್ಥರ ಹೆಜ್ಜೆ ಗುರುತುಗಳನ್ನು ಉಳಿಸುತ್ತಾ ಬಂದಿದ್ದಾರೆ. ಅವರ ಈ ಸಾಧನೆ ಫಲದಿಂದ ಇಂದು ಅವರಿಗೆ ಕರ್ನಾಟಕ ಸರ್ಕಾರ 'ಸಹಕಾರ ಸೇವಾ ರತ್ನ' ಪ್ರಶಸ್ತಿ ನೀಡಿ ಗೌರವಿಸಿದೆ ಎಂದು ಶ್ಲಾಘಿಸಿ ಅಭಿನಂದಿಸಿದರು.

ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎನ್.ಜೆ. ಗುರುಸಿದ್ಧಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಜಿ. ಪುಟ್ಟಸ್ವಾಮಿ, ದಾವಣಗೆರೆ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ, ಬಿ.ಹೆಚ್. ಪರಶುರಾಮಪ್ಪ, ರಾ.ಲ. ಕಾಯ್ದೆ ಕಾಲೇಜಿನ ವಿಶ್ರಾಂತ ಪ್ರಾಚಾರ್ಯ ಪ್ರೊ. ಸೋಮಶೇಖರಪ್ಪ, ಎಂ.ಕೆ.ಬಕ್ಕಪ್ಪ, ಹೆಚ್.ವಿ. ಮಂಜುನಾಥಸ್ವಾಮಿ ಮತ್ತಿತರರು ಸಹಕಾರ ರತ್ನ ದಿ. ಎನ್‌ಎಂಜೆಬಿ ಆರಾಧ್ಯ ಅವರ ಸಹಕಾರ ಸಾಧನೆಯನ್ನು ಸ್ಮರಿಸುವ ಜೊತೆಗೆ ನಿಶಾನಿಮಠ ಅವರನ್ನು ಅಭಿನಂದಿಸಿ, ಮಾತನಾಡಿದರು.

# ಮದುವೆಯಿಂದಾಗಿ ಖಾಸಗಿತನ ಮಸುಕಾಗದು : ಹೈಕೋರ್ಟ್

ಬೆಂಗಳೂರು, ನ. 28 - ಮದುವೆ ಮಾಡಿಕೊಂಡ ಕಾರಣಕ್ಕೆ ವ್ಯಕ್ತಿಯ ಖಾಸಗಿತನದ ಹಕ್ಕು ಮಸುಕಾಗುವುದಿಲ್ಲ ಎಂದು ಕರ್ನಾಟಕ ಹೈಕೋರ್ಟ್‌ನ ವಿಭಾಗೀಯ ಪೀಠ ತಿಳಿಸಿದೆ.

ಗಂಡನ ಆಧಾರ್ ಕಾರ್ಡ್ ವಿವರ ನೀಡುವಂತೆ ಹುಬ್ಬಳ್ಳಿ ಮಹಿಳೆಯೊಬ್ಬರು ಅರ್ಜಿ ದಾಖಲಿಸಿದ್ದರು. ಈ ಬಗ್ಗೆ ವಿಚಾರಣೆ ನಡೆಸಿದ್ದ ಏಕಸದಸ್ಯ ಪೀಠ, ಗಂಡನ ವಿವರವನ್ನು ಪತ್ನಿಗೆ ನೀಡಲು ಆಧಾರ್ ನಿರ್ವಹಿಸುವ ಯು.ಐ.ಡಿ.ಎ.ಐ. ಸಹಾಯಕ ಪ್ರಧಾನ ನಿರ್ದೇಶಕರಿಗೆ ಸೂಚನೆ ನೀಡಿತ್ತು.

ಈ ಆದೇಶ ಪ್ರಶ್ನಿಸಿ ನ್ಯಾಯಮೂರ್ತಿಗಳಾದ ಸುನೀಲ್ ದತ್ ಯಾದವ್ ಹಾಗೂ ವಿಜಯಕುಮಾರ್ ಪಾಟೀಲ್ ಅವರನ್ನು ಒಳಗೊಂಡ ವಿಭಾಗೀಯ ಪೀಠದ ಎದುರು ಅರ್ಜಿ ದಾಖಲಿಸಲಾಗಿತ್ತು.

ಗಂಡ ಜೀವನಾಂಶ ನೀಡಬೇಕಿದೆ. ಆದರೆ, ಜೀವನಾಂಶ ನೀಡದೇ ತಲೆಮರೆಸಿಕೊಂಡಿ ದ್ದಾನೆ. ಈ ಹಿನ್ನೆಲೆಯಲ್ಲಿ ನಿಜವಾದ ವಿಳಾಸ ತಿಳಿಯಲು ಆಧಾರ್ ವಿವರ ನೀಡಬೇಕು ಎಂದು ಪತ್ನಿ ಅರ್ಜಿ ದಾಖಲಿಸಿದ್ದಳು.

ಈ ಪ್ರಕರಣದ ಬಗ್ಗೆ ವಿಚಾರಣೆ ನಡೆಸಿದ ಹೈಕೋರ್ಟ್‌ನ ವಿಭಾಗೀಯ ಪೀಠ, ಮದುವೆಯಾದ ತಕ್ಷಣ ಒಬ್ಬರ ಖಾಸಗಿತನದ ಹಕ್ಕು ಮಸುಕಾಗುವುದಿ ಲ್ಲ. ವ್ಯಕ್ತಿಗಳ ವೈಯಕ್ತಿಕ ಖಾಸಗಿತನದ ಹಕ್ಕು ಮುಂದುವರೆಯುತ್ತದೆ ಎಂದು ನ್ಯಾಯಾಲಯ ಹೇಳಿದೆ.

# ಬೆಂಗಳೂರಿನಲ್ಲಿ ಎಎಂಡಿಯ ಅತಿ ದೊಡ್ಡ ವಿನ್ಯಾಸ ಕೇಂದ್ರ ಆರಂಭ

ಬೆಂಗಳೂರು, ನ. 28 – ಅಮೆರಿಕದ ಚಿಪ್ ಉತ್ಪಾದನಾ ಕಂಪನಿಯಾದ ಎ.ಎಂ.ಡಿ. ತನ್ನ ವಿಶ್ವದ ಅತಿ ದೊಡ್ಡ ವಿನ್ಯಾಸ ಕೇಂದ್ರವನ್ನು ಬೆಂಗಳೂರಿನಲ್ಲಿ ಆರಂಭಿಸಿದೆ. ಆ ಮೂಲಕ ಭಾರತದಲ್ಲಿ ತನ್ನ ಸಂಶೋಧನೆ, ಅಭಿವೃದ್ಧಿ ಹಾಗೂ ಇಂಜಿನಿಯರಿಂಗ್ ಕಾರ್ಯಾಚರಣೆಯನ್ನು ವಿಸ್ತರಿಸಿದೆ.

ಬೆಂಗಳೂರಿನಲ್ಲಿರುವ ಅತ್ಯಾಧುನಿಕ ಕ್ಯಾಂಪಸ್‌ನಲ್ಲಿ ಎ.ಎಂ.ಡಿ.ಯ 3 ಸಾವಿರ ಇಂಜಿನಿಯರ್‌ಗಳು ಮುಂಬರುವ ದಿನಗಳಲ್ಲಿ ಕಾರ್ಯನಿರ್ವ ಹಿಸಲಿದ್ದಾರೆ. ಈ ಕೇಂದ್ರದಲ್ಲಿ ಸೆಮಿಕಂಡಕ್ಟರ್ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಲಾಗುವುದು ಎಂದು ಕಂಪನಿ ತಿಳಿಸಿದೆ. ಟೆಕ್ನೋಸ್ಟಾರ್ ಹೆಸರಿನಲ್ಲಿ ಕ್ಯಾಂಪಸ್ ಆರಂಭಿಸಲಾಗಿದೆ. ಇದಕ್ಕಾಗಿ 400 ದಶಲಕ್ಷ ಡಾಲರ್‌ಗಳನ್ನು ಮುಂದಿನ 5 ವರ್ಷಗಳಲ್ಲಿ ಹೂಡಿಕೆ ಮಾಡಲಾಗುವುದು ಎಂದು ಎ.ಎಂ.ಡಿ. ಹೇಳಿದೆ.





ಶಿವ

## ವಿಶ್ವಬಂಧು ಸೌಹಾರ್ದ ಸಹಕಾರಿ ಸಂಘ ನಿಯಮಿತ, ಹರಪನಹಳ್ಳಿ




ಶ್ರೀ ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಸಿರಿಗೆರೆ, ಇವರ ಕೃಪಾಶೀರ್ವಾದದೊಂದಿಗೆ ವಿಶ್ವಬಂಧು ಸೌಹಾರ್ದ ಸಹಕಾರಿ ಸಂಘ ನಿ., ಹರಪನಹಳ್ಳಿ ಇದರ ಅಧ್ಯಕ್ಷರ ಸ್ಥಾನಕ್ಕೆ **ಶ್ರೀ ಪಿ. ಕೆಂಚನಗೌಡ ಯು. ಬೇವಿನಹಳ್ಳಿ** ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ **ಶ್ರೀ ಪ್ರಕಾಶ್ ಎಂ. ಹುಣ್ಸೆಹಳ್ಳಿ** ಇವರುಗಳು ಅವಿರೋಧವಾಗಿ ಆಯ್ಕೆಯಾಗಲು ಸಹಕರಿಸಿದ ಸಮಾಜದ ಹಿರಿಯರಾದ ಶ್ರೀ ಪಿ. ಮಹಾಬಲೇಶ್ವರ ಗೌಡ್ರು, ಶ್ರೀ ಜಿ. ನಂಜನಗೌಡ್ರು, ಹರಪನಹಳ್ಳಿ ತಾಲ್ಲೂಕು ಸಾಧು ಸಮಾಜದ ಅಧ್ಯಕ್ಷರು ಹಾಗೂ ಸದಸ್ಯರು, ಸಮಾಜದ ಹಿರಿಯರು, ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರು, ಸಿಬ್ಬಂದಿ ವರ್ಗದವರು ಹಾಗೂ ಸಂಘದ ಎಲ್ಲಾ ಷೇರುದಾರರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಅಧ್ಯಕ್ಷರು : ಪಿ. ಕೆಂಚನಗೌಡ ಯು. ಬೇವಿನಹಳ್ಳಿ

ಉಪಾಧ್ಯಕ್ಷರು: ಪ್ರಕಾಶ್ ಎಂ. ಹುಣ್ಸೆಹಳ್ಳಿ

**ನೂತನ ಆಡಳಿತ ಮಂಡಳಿಯ ನಿರ್ದೇಶಕರು**


ಪಿ. ಪ್ರೇಮ್‌ಕುಮಾರ್, ಚಿಗಟೇರಿ


ಶೈಲಜಾ ಹೆಚ್. ಹರಪನಹಳ್ಳಿ


ಬಸವನಗೌಡ ಬಿ.ವಿ. ಗೌರಿಪುರ


ಆರ್. ಶಿವಕುಮಾರ್‌ಗೌಡ, ಬಾಗಳಿ


ಟಿ. ಮಂಜುನಾಥ್, ಅಣಜಿಗೆರೆ


ಕಿರಣ್ ಕುಮಾರ್ ಜಿ.ಕೆ., ಕ್ಯಾರಕಟ್ಟೆ


ಗೌಡ್ರು ಎರ್ರಿಸ್ವಾಮಿ, ಡಗ್ಗಿಬಸಾಪುರ


ಶಶಿಕಲಾ ಎಂ. ನಂದಿಬೇವೂರು

#117/ಜಿ3, ಜಿ4, ಆದರ್ಶ ಕಾಂಪ್ಲೆಕ್ಸ್, ಐ.ಬಿ.ಸರ್ಕಲ್ ಹತ್ತಿರ, ಹೊಸಪೇಟೆ ರಸ್ತೆ, ಹರಪನಹಳ್ಳಿ, ವಿಜಯನಗರ - 583131,
ಮೊಬೈಲ್ : 94482 60430, 99020 62828, E-mail - vishwabandhu2018.19@gmail.com


# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಶಾಮನೂರು ರಸ್ತೆ, ಎಸ್.ಎಸ್ ಲೇಔಟ್ ಎ ಬ್ಲಾಕ್, ಕುವೆಂಪು ನಗರ, ಲಕ್ಷ್ಮಿ ಪ್ಲೋರ್ ಮಿಲ್, ಜಿ.ಹೆಚ್ ಪಾರ್ಕ್, ಸಿದ್ದವೀರಪ್ಪ ಬಡಾವಣೆ, ಬಿ.ಐ.ಇ.ಟಿ. ರಸ್ತೆ, ಎಸ್.ಎನ್. ಲೇಔಟ್, ಗ್ಲಾಸ್‌ಹೌಸ್ ಏರಿಯಾ, ಎಸ್.ಓ.ಜಿ. ಕಾಲೋನಿ ಎ, ಬಿ ಮತ್ತು ಸಿ ಬ್ಲಾಕ್, ಬುದ್ದ, ಬಸವ ಭೀಮ ನಗರ , ಕರ್ನಾಟಕ ಬೀಜ ನಿಗಮ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಎಆರ್‌ಜಿ ಕಾಲೇಜಿನಲ್ಲಿ ಸಭೆ


ಎ.ಆರ್.ಜಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಬರುವ ಡಿಸೆಂಬರ್ 7 ಮತ್ತು 8 ರಂದು ನ್ಯಾಕ್ ಸಮಿತಿ ಸದಸ್ಯರು ಭೇಟಿ ನೀಡಲಿದ್ದು, ಈ ಸಂಬಂಧ ಕಾಲೇಜಿನ ಎಲ್ಲಾ ಹಿರಿಯ ವಿದ್ಯಾರ್ಥಿಗಳು ಇಂದು ಮಧ್ಯಾಹ್ನ 3 ಗಂಟೆಗೆ ನಡೆಯುವ ಹಿರಿಯ ವಿದ್ಯಾರ್ಥಿಗಳ ಸಭೆಗೆ ಆಗಮಿಸುವಂತೆ ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ.

# ನೌಕಾ ದಳ ವಿಮಾನ ವಾಹಕ ಖರೀದಿಗೆ ಸಮ್ಮತಿ

ನವದೆಹಲಿ, ನ. 28 – ಎರಡನೇ ದೇಶೀಯ ವಿಮಾನ ವಾಹಕ ಖರೀದಿಯ ನೌಕಾ ದಳದ ಪ್ರಸ್ತಾವನೆಗೆ ರಕ್ಷಣಾ ಖರೀದಿ ಮಂಡಳಿ ಒಪ್ಪಿಗೆ ನೀಡಿದೆ. 40 ಸಾವಿರ ಕೋಟಿ ರೂ. ವೆಚ್ಚದಲ್ಲಿ ವಿಮಾನ ವಾಹಕ ಖರೀದಿಸಲಾಗುವುದು.

ಮಹತ್ವಾಕಾಂಕ್ಷಿ ಪ್ರಸ್ತಾಪಕ್ಕೆ ತಾತ್ವಿಕ ಒಪ್ಪಿಗೆ ನೀಡಲಾಗಿದೆ. ಶೀಘ್ರದಲ್ಲೇ ಈ ಪ್ರಸ್ತಾವನೆಯನ್ನು ರಕ್ಷಣಾ ಖರೀದಿ ಮಂಡಳಿಗೆ ಸಲ್ಲಿಸಲಾಗುವುದು ಎಂದು ಮೂಲಗಳು ತಿಳಿಸಿವೆ.


# ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಅರ್ಜಿ ಆಹ್ವಾನ



ರಾಣೇಬೆನ್ನೂರು, ನ.28- ಕೃಷಿಯಲ್ಲಿ ಗಣನೀಯ ಸಾಧನೆ ಮಾಡಿರುವ ರೈತರಿಗೆ ಶ್ರೇಷ್ಠ ಕೃಷಿಕ ಪ್ರಶಸ್ತಿ ಹಾಗೂ ನಗದು ಬಹುಮಾನ ನೀಡಲು 2023-24ನೇ ಸಾಲಿನ ಆತ್ಮ ಯೋಜನೆಯಲ್ಲಿ ಅರ್ಜಿ ಆಹ್ವಾನಿಸಿದ್ದು, ಸಾಧನೆ ಮಾಡಿದ ರೈತರು ಡಿಸೆಂಬರ್ 15 ರೊಳಗಾಗಿ ಅರ್ಜಿ ಸಲ್ಲಿಸುವಂತೆ ಸಹಾಯಕ ನಿರ್ದೇಶಕ ಹಿತೇಂದ್ರ, ಗೌಡಪ್ಪಳವರ ತಿಳಿಸಿದ್ದಾರೆ.

ಸಮಗ್ರ ಕೃಷಿ ಪದ್ದತಿ, ಸಾವಯವ ಕೃಷಿ ಪದ್ದತಿ, ವೈಜ್ಞಾನಿಕ ಯಂತ್ರೋಪಕರಣದ ಕೃಷಿಯಲ್ಲಿ ಸಾಧನೆ ಮಾಡಿದ ತಾಲ್ಲೂಕಿನ ರೈತರಿಗೆ ತಲಾ ಒಂದರಂತೆ ಮೂರು, ವೈಜ್ಞಾನಿಕ ತೋಟಗಾರಿಕೆ, ವೈಜ್ಞಾನಿಕ ಹೈನುಗಾರಿಕೆ ಎರಡು ಸೇರಿ ಒಟ್ಟು 5 ಪ್ರಶಸ್ತಿ ಕೊಡಲಾಗುವುದು. ಹೆಚ್ಚಿನ ಮಾಹಿತಿಗೆ 8217484681, 8884529278, 8867865916 ಸಂಪರ್ಕಿಸಲು ತಿಳಿಸಲಾಗಿದೆ.


## ಆರನೇ ವರ್ಷದ ಪುಣ್ಯಸ್ಮರಣೆ



**ಲಿಂ|| ಶ್ರೀ ಎನ್.ಎಂ.ಜೆ.ಬಿ. ಆರಾಧ್ಯ**

ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ ಸಂಸ್ಥಾಪಕರು,
ಸಹಕಾರಿ ಧುರೀಣರು, 'ಸಹಕಾರ ರತ್ನ' ಪ್ರಶಸ್ತಿ ಮತ್ತು 'ಸಮನ್ವಯ ಸಿರಿ' ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರು,
ಕರ್ನಾಟಕ ರಾಜ್ಯ ಸಹಕಾರಿ ಮಹಾಮಂಡಳದ ಮಾಜಿ ನಿರ್ದೇಶಕರು,
ದಾವಣಗೆರೆ ಜಿಲ್ಲಾ ಸಹಕಾರ ಯೂನಿಯನ್‌ನ ನಿರ್ದೇಶಕರು ಮತ್ತು
ದಾವಣಗೆರೆ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟದ ಗೌರವ ಕಾರ್ಯದರ್ಶಿಗಳೂ ಆಗಿದ್ದ

*ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.*

ಸಹೋದರರು, ಸೊಸೆಯಂದಿರು, ಮಕ್ಕಳು
ಪುತ್ರರು - ಸೊಸೆಯಂದಿರು, ಮಕ್ಕಳು, ಮೊಮ್ಮಕ್ಕಳು
ಪುತ್ರಿಯರು, ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು,
ಮರಿಮೊಮ್ಮಕ್ಕಳು ಮತ್ತು ಬಂಧು-ಮಿತ್ರರು.



## ಪುಣ್ಯಸ್ಮರಣೆ



**ದಿ|| ಶ್ರೀ ಜಿ. ಮಲ್ಲಿಕಾರ್ಜುನಪ್ಪನವರು**
ಲೋಕಸಭಾ ಸದಸ್ಯರು, ದಾವಣಗೆರೆ ಕ್ಷೇತ್ರ
20ನೇ ವರ್ಷದ ಪುಣ್ಯಸ್ಮರಣೆ

**ದಿ|| ಶ್ರೀಮತಿ ಹಾಲಮ್ಮನವರು**
ದಿ|| ಶ್ರೀ ಜಿ. ಮಲ್ಲಿಕಾರ್ಜುನಪ್ಪನವರ ಧರ್ಮಪತ್ನಿ
17ನೇ ವರ್ಷದ ಪುಣ್ಯಸ್ಮರಣೆ

ಭ್ರಷ್ಟಾತೀತ, ಜಾತ್ಯಾತೀತ, ಅಜಾತಶತ್ರು ರಾಜಕಾರಣಿಯಾಗಿ, ತಮ್ಮ ನಿಷ್ಕಲ್ಮಶ ರಾಜಕೀಯ ಸೇವೆಯ ಮೂಲಕ ನಮಗೆ ಆದರ್ಶಪ್ರಾಯವಾದ ತಮ್ಮ ಕೀರ್ತಿ ಸದಾ ಅಜರಾಮರ.

ಸದಾ ನಿಮ್ಮ ಸ್ಮರಣೆಯಲ್ಲಿರುವ **ಡಾ. ಜಿ.ಎಂ. ಸಿದ್ದೇಶ್ವರ**
ಲೋಕಸಭಾ ಸದಸ್ಯರು ಹಾಗೂ ಮಾಜಿ ಕೇಂದ್ರ ಸಚಿವರು, ದಾವಣಗೆರೆ.

ನಾಳೆ ಭೀಮಸಮುದ್ರದಲ್ಲಿ ನಡೆಯಲಿರುವ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ತಾವುಗಳು ಪಾಲ್ಗೊಳ್ಳಬೇಕಾಗಿ ವಿನಂತಿಸುತ್ತೇವೆ.

**ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುವವರು**

ಶ್ರೀಮತಿ ಗಾಯಿತ್ರಿ ಮತ್ತು ಶ್ರೀ ಜಿ.ಎಂ. ಸಿದ್ದೇಶ್ವರ
ಶ್ರೀಮತಿ ಶೀಲ ಮತ್ತು ಶ್ರೀ ಜಿ.ಎಂ. ಪ್ರಸನ್ನಕುಮಾರ್
ಶ್ರೀಮತಿ ವೀಣಾ ಮತ್ತು ಶ್ರೀ ಜಿ.ಎಂ. ಲಿಂಗರಾಜು
ಶ್ರೀಮತಿ ಸವಿತ ಮತ್ತು ಶ್ರೀ ಜಿ.ಎಸ್. ಅನಿತ್‌ಕುಮಾರ್ ಮತ್ತು ಮಕ್ಕಳು
ಶ್ರೀಮತಿ ಸುಲೋಚನ ರಾಜಶೇಖರ್‌ಗೌಡ ಮತ್ತು ಮಕ್ಕಳು
ಶ್ರೀಮತಿ ಗಾಯತ್ರಿ ಮತ್ತು ಶ್ರೀ ವೈ.ಯು. ಸುಭಾಷ್‌ಚಂದ್ರ ಮತ್ತು ಮಕ್ಕಳು
ಶ್ರೀಮತಿ ಪ್ರಮೀಳ ಮತ್ತು ಶ್ರೀ ವೈ.ಎಸ್. ನಟರಾಜ್ ಮತ್ತು ಮಕ್ಕಳು
ಶ್ರೀಮತಿ ಸಂಧ್ಯಾ ಮತ್ತು ಶ್ರೀ ಆರ್.ಕೆ. ರಾಜು ಮತ್ತು ಮಕ್ಕಳು
ಶ್ರೀಮತಿ ಅಶ್ವಿನಿ ಮತ್ತು ಡಾ|| ಕೆ.ಜೆ. ಶ್ರೀನಿವಾಸ್ ಮತ್ತು ಮಕ್ಕಳು
ಶ್ರೀಮತಿ ಸೌಂದರ್ಯ ಮತ್ತು ಡಾ|| ಸಿ.ಎಲ್.ದೀಪಕ್ ಮತ್ತು ಮಕ್ಕಳು
ಶ್ರೀಮತಿ ಜಿ.ಪಿ.ಸುಷ್ಮಿತ ಮತ್ತು ಶ್ರೀ ವಿಜಯ ನಿರಾಣಿ ಮತ್ತು ಮಕ್ಕಳು
ಜಿ.ಪಿ.ಮಲ್ಲಿಕಾರ್ಜುನ, ಜಿ.ಎಲ್.ರಾಜೀವ್, ಜಿ.ಎಲ್.ಸಾನೀಕ.

ಶ್ರೀಶೈಲ ಎಜುಕೇಶನಲ್ ಟ್ರಸ್ಟ್ (ರಿ)., ಭೀಮಸಮುದ್ರ,
ಜಿ.ಎಂ. ವಿಶ್ವವಿದ್ಯಾಲಯ, ದಾವಣಗೆರೆ,
ಜಿಎಂ. ಸಮೂಹ ಸಂಸ್ಥೆಗಳು, ದಾವಣಗೆರೆ, ಹಾವೇರಿ, ಬೆಂಗಳೂರು.
ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಜಿಎಂ. ಕುಟುಂಬ ಮತ್ತು ಪಟೇಲ್ ವಂಶಸ್ಥರು,
ಅಭಿಮಾನಿಗಳು ಹಾಗೂ ಬಂಧು-ಮಿತ್ರರು.

ಹಳೇ ವಾಣಿ ಹೋಂಡಾ ಶೋ ರೂಂ ಆವರಣದಿಂದ ಭೀಮಸಮುದ್ರಕ್ಕೆ ಹೋಗಿ ಬರುಲು ಬಸ್ಸಿನ ವ್ಯವಸ್ಥೆ ಮಾಡಲಾಗಿದೆ.